


ಶಿರಗಾನಹಳ್ಳಿ ಶಾಂತನಾಯ್ಕ

ಚರಗ

ಚರಗ

ಚರಗ

ಶಿರಗಾನಹಳ್ಳಿ ಶಾಂತನಾಯ್ಕ

ಮೇಘ ಪಬ್ಲಿಕೇಷನ್ಸ್
ಬೆಂಗಳೂರು

Charaga
A Drama by
N. Shantha ~~nayak~~
Associate Professor
Vijayanagara Srikrishana devaraya University
Vinayaka nagar
Ballari - 560 002
Mobile : 94490 21006

Published by
Megha Publication
Site No. 419, Door No. 119
4th Cross, Rajgopal Nagar
Bangalore - 560 058

First Impression : 2014
Price : **Rs. 50/-**
Pages : vi + 66 = 72
Paper Used : 80 GSM Maplitho
Book Size : 1/8th Demmy
ISBN : 978-83-83268-11-5

Printed by
Sairam Printers
Rajajinara, 6th Block
Bangalore - 560 010

ತೆರೆಎಳೆಯುವ ಮೊದಲು

ಚರಗ – ನನ್ನ ಎರಡನೇಯ ನಾಟಕ ಮೊದಲ ನಾಟಕ ಪಾತ್ರಗಳು ಬಿ.ವಿ.ಕಾರಂತ ಪ್ರತಿಷ್ಠಾನದ ಬಹುಮಾನ ಪಡೆದಾಗ ನಾನೇ ಅಚ್ಚಾರಿಗೊಂಡಿದ್ದೆ. ಶ್ರೀಮತಿ ಎಸ್. ಮಾಲತಿಯವರು ತುಂಬಾ ಚೆನ್ನಾಗಿದೆ ಕಣ್ರೀ ನಾಟಕ ಎಂದಾಗ ಖುಷಿಯಾಗಿತ್ತು. ನಾಟಕ ನೋಡುಗ, ಓದುಗ, ಅಭಿನಯಿಸುವ ಕಲಾವಿದ ಈ ಮೂವರ ಹೆಗಲ ಮೇಲಿರುವ ಜವಾಬ್ದಾರಿ. ನಾಟಕಕಾರ ಬರೆದು ತೆರೆಯ ಹಿಂದೆ ಸರಿದು ಬಿಡುತ್ತಾನೆ. ಅದನ್ನ ಮೆಚ್ಚುವ– ಪ್ರಶಂಸಿಸುವ ಜವಾಬ್ದಾರಿ, ಈ ಮೂವರ ಮೇಲಿರುತ್ತದೆ. ಹಾಗಾಗಿ ಒಂದು ನಾಟಕದ ಯಶಸ್ಸು ಒಂದು ತಂಡಕ್ಕೆ ಸೇರುತ್ತದೆ. ಪ್ರತ್ತುತನಾಟಕ ಬದುಕಿನ ವೈಪರೀತ್ಯವನ್ನ ಕುರಿತಾದದ್ದು. ಇಲ್ಲಿ ಬರುವ ಪಾತ್ರಗಳು, ಹೆಸರುಗಳು, ಘಟನೆಗಳು ಕೇವಲ ಕಾಲ್ಪನಿಕವಾದದ್ದು. ಈ ಹೆಸರಿನವರು ಅಥವಾ ಇಂಥಹ ಘಟನೆಗಳು ಸಂಭಂವಿಸಿದ್ದಲ್ಲಿ ಅದು ಕೇವಲ ಕಾಕತಾಳೀಯವಾದದ್ದು. ಬಹಳ ದಿನಗಳಿಂದ ಕಾಡುತ್ತಿದ್ದ ಚರಗ ಈಗ ನಾಟಕರೂಪವನ್ನ ತಳೆದಿದೆ. ನಾಟಕ ನನಗಂತು ಅತ್ಯಂತ ಪ್ರೀತಿಯ ಪ್ರಕಾರ. ಆದರೆ ಕಾದಂಬರಿಯನ್ನು ಕೂಡ ಅಷ್ಟೆ ಇಷ್ಟದಿಂದ ಬರೆಯುವ ಮನೋಭಾವ ನನ್ನದು. ಹಾಗಾಗಿ ಓದುಗ ಮತ್ತೆ ಕಲಾವಿದ ಮೆಚ್ಚಿಕೊಂಡು ಬೆನ್ನು ತಟ್ಟಿದರೆ ಖುಷಿಯಾದೀತು. ಏಕೆಂದರೆ ಬದುಕಿನ ನಗ್ನ ಚಿತ್ರಗಳು ಬಹಳಷ್ಟು ಜನರಿಗೆ ಗೊತ್ತೆ ಇಲ್ಲ. ಜನ ಹೇಗೆ ಬದುಕಿದ್ದಾರೆ, ಏನನ್ನು ಯೋಚನೆ ಮಾಡುತ್ತಿದ್ದಾರೆ ಬಹಳ ಮುಖ್ಯವಾದದ್ದು. ಶ್ರೇಣಿಕೃತ ವ್ಯವಸ್ಥೆಯಲ್ಲಿ ಹಿಂದೂ ಧಾರ್ಮಿಕ ವಿಧಿ ವಿಧಾನಗಳು

ಕೆಲವರಿಗೆ ಒಳ್ಳೆಯದಾಗಿದ್ದರೆ, ಕೆಲವರನ್ನ ಹಿಂಡಿ ಹಿಪ್ಪೆ ಮಾಡಿ ಬಿಡುತ್ತದೆ. ಉಳ್ಳವರ ವಿರುದ್ಧ ಧ್ವನಿ ಎತ್ತಿದವನಿಗೆ ಅನೇಕ ಸಂದರ್ಭಗಳಲ್ಲಿ ಜನ ಹೇಳುವುದು 'ಇದೆ ತಡಿಮಾರಿ ಹಬ್ಬ' ಅಥವಾ 'ಚರಗ ಚೆಲ್ತಾರ ಇರು' ಎಂದು ಭಯ ಹುಟ್ಟಿಸುವುದು ವಾಡಿಕೆ. ಇದೇ ಭಯ ಸತ್ಯವಾದಾಗ ಆಗುವ ಸಂದಿಗ್ಧತೆಯೇ ಚರಗ

– ಡಾ. ಶಿರಗಾನಹಳ್ಳಿ ಶಾಂತನಾಯ್ಕ

ದೃಶ್ಯ–೧
ಸನ್ನಿವೇಶ–೧

(ಹಲಿಗೆ ಸದ್ದು ಜಡ್ನಂಗ್, ಜಡ್ನಂಗ್)....ಬಾರಿಸುತ್ತ ಸ್ಟೇಜಿನ ಎರಡು ಕಡೆಗೆ ತಿರಗಾಡುತ್ತಿದ್ದಾನೆ.ಒಮ್ಮೆ ಸಣ್ಣಗೆ, ಮತ್ತೊಮ್ಮೆ ಜೋರಾಗಿ ಹಲಿಗೆ ನುಡಿಸುತ್ತಿದ್ದಾನೆ. ಹಲಿಗೆ ಸದ್ದು ಕಡಿಮೆಯಾಗುತ್ತಿದ್ದಂತೆ ಕಪ್ಪಗಿನ ಆಕೃತಿ ಪ್ರವೇಶ.....)

ಆಕೃತಿ :- ಹೌದು ಇದು ವಾಸ್ತವ, ಅಲ್ಲಿ ಕುಳಿತಿರುವ ನೀವು ಸತ್ಯ. ಇಲ್ಲಿ ಮಾತಾಡುತ್ತಿರುವ ಆಕೃತಿ, ಧ್ವನಿ ಎಲ್ಲವೂ ಸತ್ಯ. ಕ್ಷಮಿಸಿ, ನಾನೇನು ಈ ನಾಟಕದ ನಿರೂಪಕವಾಗಲಿ, ಸೂತ್ರಧಾರ ಅಲ್ಲ. ಬದುಕೆ ಇಲ್ಲದ ಕನಸೇ ಇಲ್ಲದ ಬದುಕನ್ನ ಬದುಕಿ ಉಳ್ಳವರ ತೆವಲಿಗೆ ಬಲಿಯಾಗುವ ಬಲಿಪಶುಗಳ ಬದುಕ ವೃತಾಂತವನ್ನು ನಿಮ್ಮಗಳಿಗೆ ಹೇಳಬೇಕೆಂದು ಆರ್ವಿಭಿಸಿರುವ ಕೇವಲ ಆಕೃತಿ ನಾನು. ಹಾಂ....ಒಂದು ಮಾತು, ನನಗೆ ಯಾವು ಪರಂಪರೆ ಅನ್ನೋದೆ ಇಲ್ಲ, ಯಾವ ಭವಿಷ್ಯ ಕೂಡ ಜಗತ್ತಿನಲ್ಲಿ ಬದುಕಿರುವ ಮುಕ್ಕಾಲು ಪಾಲು ಮಂದಿಗೆ ಯಾವ ಕನಸುಗಳು ಇಲ್ಲ. ಅವರ ಬದುಕು ಬದುಕೆ ಅಲ್ಲ. ಅವರೆಲ್ಲಾ ನನ್ನ ಹಾಗೆ ಕೇವಲ ಮನುಷ್ಯನ ಆಕೃತಿಗಳು ಮಾತ್ರ. ಜೀವವಿಡಿ ಜೀವಂತಿಕೆ ಇಲ್ಲದೆ ಬದುಕಿದ್ದಾರೆ, ಭಾವನೆಗಳೇ ಇಲ್ಲ. ಇಂತಹದೊಂದು ಬದುಕಿನ ವಿಪರ್ಯಾಸದ ಸತ್ಯ ಸಂಗತಿಯ ಜೀವಸ್ವರೂಪ ಸಾಕ್ಷಾತ್ಕಾರ ನಿಮ್ಮ ಅನುಭವಕ್ಕೆ ಬರಲಿದೆ, ಅನುಭವಕ್ಕೆ ಬರಲಿದೆ...

ಸಂಕಜ್ಜಿ :- ಈ ಪಾಟಿ ಕತ್ತಲು ನಮ್ಮ ಗುಡ್ಲುಗಳ ಸುತ್ತಾನೆ ಇರಾಕ ಸಾದ್ಯ. ನೀ ಏನು ಹೆದರ ಬೇಡ ಓಲಿಯಾನ ಬೂದಿನ ಊದಿ ನಿಗಿ ನಿಗಿ ಕೆಂಡನ ಬೆಳಗಿಸ್ತಿನಿ. ಹಾಳಮನಿ ದೇವ್ರು ಬಡವರ ಬಾಳೇವಿನ ಕೂಡ ಕುಸ್ತಿ ಆಡ್ತನೆ ದವಳೇರ ತಾವ ಕುಂತು ಭಂಗಿ ಹೊಡಿತಾನ.

(ಬೆಳಕು ಹರಿಯುವ ದಿಕ್ಕಿನ ಕಡೀಗ ಮಾರಿ ಮಾಡಿ ಅಣಕಿಸು ವಂತೆ)

ಊರ್ರ್ss..... ಊಸ್ಸ್ss...... ಓಯ್ss.....

ಉರ್ರ್ss..... ಉರ್ರ್ss.....

ದಿಂಡ :- ಅಲ್ಲಬೇ ಮುದ್ಕಿ ನಾನುವೆ ಆಟವರ್ಷಗಳಿಂದ ನೋಡ್ತನೇ ಬಂದೀನಿ ಅದೇನನಿಂದು ಆ ಬೆಳಕ ಕೊಡೊ ಬೆಳ್ಳಿ ದೇವನದ್ದು ಪಾಟೀಸವಾಲು ಅಂತೀನಿ. ಕತ್ತಲನ್ನೋ ಆಹಂನ ಮದಿಸಿ ನಮ್ಮಪ್ಪ ನನತಂದಿ ಈ ಭೂಮಿ ಮ್ಯಾಲಿನ ಚಾರಚರ ಜೀವಿಗಳಿಗ ಚಲನೆ ಕಣಡ್ತಾನ.

ಸಂಕಜ್ಜಿ :- ಎಯ್, ಮೂದೇವಿ, ಕರಿಮಂದಿ ಕಂಡ್ರ ಅವನಿಗಾಗದು ಕರಿಚರ್ಮ ದೊಳಗ ಪಿಂಡಗಟ್ಟಿರೊ ಮಾಂಸ, ಬಂದೂಕಿನ ನಳಗಿಯಂಗೆ ಜೋಡಗುಂಡಿಗೆ ನಮ್ಮಟ್ಟಿಗಳು, ತಾಂಡೆಗಳು ಅಂದ್ರ ಉಳ್ಳವರ ಒಡಲಿಗೆ ಕೊಳ್ಳಿ ಇಡ್ತಾವ ಅವನು ಹಂಗೇಯ ಉಳ್ಳವರ ಮಹಾಡಿಮನಿ ಮೋಡಿಕಣ್ಣವಳ ನಿದ್ದೆಗೆಡಸಿದ್ದ..... ಆಹಾ.... ಕೊಮರಾಮ ನನ್ನಪ್ಪ ಆದ್ರ...... (ಅಳುವಳು)

ಸಾವನ್ನೋ ಸಾವೇ ಹಂಗಬಡದಿತ್ತು ಸುಂಯ್ss ಅಂತ ಬೀಸೋ ಗಾಳಿ ಘಳಗಿಕಾಲ ಅವನ ಗುಂಡಿಗಿ ಬಗದು ರಕ್ತದೋಕಳಿ ಆಡಿ ನರನಾಡಿಗಳನ್ನು ನಾಕ್ಕು ದಿಕ್ಕಿಗ ನೈ ವೇದ್ಯ ಮಾಡಿದಾಗ ಗರಬಡದು ನಿಂತ ಬಿಟ್ಟಿತ್ತು.

ದಿಂಡ :- (ಕೆಂಪಗೆ ನಿಗಿ ನಿಗಿ ಆದ ಕಣ್ಣುಗಳಿಂದ, ಆರ್ಭಟಿಸುತ್ತ, ಅವಳನ್ನ ಅಚಾಮತ್ತಾಗಿ ಎತ್ತಿ ನೆಲಕ್ಕೆ ಕುಕ್ಕದವನ) ಹಾಳು ಕನವರಿಕೆಯನ್ನು ಮತ್ತೆ ನನ್ನೆದುರಿಗೆ ಬಿತ್ತರಿಸಿ ನನ್ನ ಅಸಹಾಯಕತೆಯನ್ನು ಹಂಗಿಸಿ ನನ್ನ ಮೇಲೆ ಸವಾರಿ ಮಾಡುತ್ತಿರುವ ಕೆಟ್ಟ ಕನಸುಗಳಿಗೆ ನನ್ನ ಆಹುತಿ ಮಾಡಬೇಡ...

(ಘರ್ಜಿಸುವ ಹುಲಿಯಂತೆ ನಾಕುಮೂಲೆಯಲ್ಲಿ ಘರ್ಜಿಸುತ್ತ ವ್ಯವಸ್ಥೆಯ ಮೇಲಿನ ತನ್ನ ಕೋಪವನ್ನು ತಣ್ಣಗೆ ಮಾಡಿಕೊಳ್ಳಲು ಹವಣಿಸುತ್ತಾನೆ)

ಸಿಂಕ್ಲಿ :- ಲೇ ದಿಂಡ.... ಎಷ್ಟು ಹಾರಾಡಿದ್ರೂ ನಮ್ಮ ಜಗತ್ತು ಇಷ್ಟೇ... ನಮ್ಮವ್ಕೆ ಬುದ್ಧಿ ಇಲ್ಲಾ ಮಗ ಗಾಳಿ ಗುದ್ದಿ ಮೈನೋವು ಮಾಡ್ಕತವೆ. ತಣ್ಣಗೆ ಸಿಟ್ಟನ್ನುವ ಭಷ್ಮಾಸುರನ ಗೆದ್ದು. ಯಾವ ದಾಳಿಗಳನ್ನ ಯಾವಾ ಜಾಗದಾಗ

ನಡಸಬೇಕಂತ ಚಾಣಕ್ಷ ಬುದ್ಧಿಯ ಪಂಡಿತರ ಪೌರುಷ ನಮ್ಮಂತ ಹಟ್ಟಿಮಂದಿಗ ಬಂದಿತೇನ್ಲಾ...

ದಿಂಡ :- ಯವ್ವಾ..... ಮರ್ಮದಮತಾಡಿ ನನ್ನ ಮತ್ತೆ ಕೆಂಡಮಂಡಲ ಆಗಿಸಬೇಡ. ಹೇಳೋದ್ರಿದ ನೆಟ್ಟಗ ಹೇಳು.

ಸಿಂಕ್ಲಿ :- ಅದೇ ಕಣ್ಲಾಮಗ ಬುದ್ಧಿ ಅನೋದು. ನಮ್ಮಂತ ಪಾಪಾತ್ಮರಿಗ ಇನ್ನೂ ಸಿಕ್ಕಿಲ್ಲಾ. ಕಂಡತಿಂದು ಹೆಂಡ ಕುಡದು ಜಗತಗೆದ್ವಿ ಅಂತ ಮೇರಿಯೋ ಮಂದಿತಾವ ಏನೈತೇಳು. ಎದಿಯೊಳಗ ರೋಷ ಹಂಗೆ ನಿಗಿ ನಿಗಿ ಬೂದಿಮುಚ್ಚಿದ ಕೆಂಡದಂಗೆ ಉರಿತಾನೆ ಇರಬೇಕು. ಹೊರಗೆ ಶಾಂತಚಿತ್ತ ಮುಖ ಮುದ್ರೆ ಹಾಕಿಕೊಂಡು ಸರಿಯಾದ ಸಮಯದ ಹಾದಿಯನ್ನು ಕಾಯ ಬೇಕು. ಸಮಯ ಬಂದಾಗ ನಿಲ್ಲಲ್ಲು ನೆಲೆಯೆ ಸಿಗದಂತೆ ಸ್ಫೋಟಗೊಳ್ಳಬೇಕು. ಆದ್ರ ನಮ್ಮಮಂದಿ ಆ ಕ್ಷಣದ ಸಿಟ್ಟನ ನಾಕು ಕೆಟ್ಟಕೊಳಕು ಮಾತಿಂದ ಬೋಯ್ದು ನಿಷ್ಠುರ ಕಟ್ಕೊಂಡೂ ಇಲ್ಲಾ ಮೈಯಾಗ ಕಸು ಐತಂತೇಳಿ ಮಾರ ಮಾರಿ ಮಾಡ್ಕಂಡು ದ್ವೇಷ ಕಟ್ಕಂತವೆ......

ಆಕೃತಿ :- ಸಿಂಕ್ಲಿ ಮಾತು ದಿಟವೆ. ತೊಳ್ನಾಗೆ ಶಕ್ತಿ ಐತೆ ಅಂತ ಅವನು ಏನೇನ ಮಾಡಲಿಲ್ಲಾ ಹುಚ್ಚ ಹುಡುಗ. ಈ ಸಂಸಾರದ ಅಸಮಧಾನಕ್ಕೆ ಅವನ ಉಗ್ರವಾದ ಕೋಪಾಗ್ನಿಯೇ ಕಾರಣ.... ಅವನು ಅಂದ್ರೆ ಯಾರಂತೀರಾ? ಅವನು ನಿಮ್ಮ ಹಾಗೆ ಉಸಿರಾಡ್ತಿದ್ದೋನು. ಶತಮಾನಗಳಿಂದಲೂವೆ ಈ ಭೂಮಿ ಮೇಲಿನ ಶೋಷಣೆಗೆ ಮೈಯೊಡ್ಡಿಕೊಂಡಿದ್ದವನು. ಬದುಕಿನಲ್ಲಿ ಅನುಮಾನವ ಸಹಿಸಿಕೊಂಡೆ ಬದುಕಿದ್ದವನು. ಅವನೊಬ್ಬ ಗುಲಾಮ. ಉಳ್ಳವರಿಗೆ ಪರಾಕು ಹೇಳುತ್ತಾ, ಜೀ ಹುಜೂರ್ ಎನ್ನುತ್ತಲೆ ಕಡೆಗೊಮ್ಮೆ ಜೀವ ಕಳೆದು ಕೊಂಡವ..... ಅವನು...?

* * *

ಸನ್ನಿವೇಶ-೨

(ಗೌಡ, ಸಿಂಹಾಸನದಂತ ಕುರ್ಚಿಯ ಮೇಲೆ ಆಸೀನ ನಾಗಿದ್ದಾನೆ ಅವನತ್ತ ಆಳು)

ಸರ್ಪ :- ನೀವು ಹೂಂ ಅನ್ನಿಬುದ್ದಿ, ಅಷ್ಟೇ ಆಟ ಮುಗೀತಂತ.

ಸೊಳ್ಳೆಗೌಡ :- ಲೇ...... ಲೇ ಸೂಳೆಮಗನ. ಯಾವನಲೇ ಅಂವ ನಿನ್ನ ಹೆಸರು ಸರ್ಪ ಅಂತಿಟ್ಟೋನು. ಒಳ್ಳೆ ಸರ್ಪದಂಗೇಯ ಕಡಿಯಾಕೆ, ಕಚ್ಚೋಕೆ ತಯಾರಾಗಿರ್ತಿಯ ಯಾವಾಗ ನೋಡಿದ್ರು. ಒಸಿತಾಳ್ಮೆ ಇರ್ಲಿ.

ಸರ್ಪ :- ಅದು ನಮ್ಮವ್ವ ನನ್ನ ಹಡದ ಟೇಮನಾಗೆ ಸರ್ಪ ಅಡ್ಡ ಹೊಂಟಿತಂತೆ ನಮ್ಮ ಗುಡ್ಲ ಮುಂದೆ, ನನ್ನ ಹಡದವಳೆ ಸರ್ಪ ಅಂದು ಮೂರ್ಛೆ ಹ್ವಾದ್ಲಂತೆ. ನಮ್ಮ ಹಟ್ಟಿ ಮಂದಿ ಸರ್ಪ ಸರ್ಪ ಅಂತೇಳಿ ಕರಿಯಾಕ ಚಾಲು ಮಾಡಿದ್ರಂತೆ.

ತೀಟೆಗೌಡ :- ಆಹಾ, ಎಂಥ ಕತಿ ಏತಪ್ಪ ನಿಂದು. ಅನಾದಿ ನನಮಕ್ಳ ನಿಮ್ಮದು ಒಂದ ಬದುಕೇನ್ರಲೇ. ಸಾಯೋಗಂಟಾನು ನಮ್ಮ ಹಿಂದ ಅಡ್ಡಾಡೋದು, ನಮ್ಮ ಜಮೀನ ದಾಗ ಜೀತಮಾಡೋದು. ಹೂಂ.....

ಸೊಳ್ಳೆಗೌಡ :- ಲೇ ತೀಟೆಗೌಡ. ಈಗ ಯಾವಾನಾರು ನಿನ್ನ ವಿರುದ್ಧ ಸೊಲ್ಲೆತ್ತಿದ್ನೇನು? ಯಾಕ ಅವರಿಗೆ ನೀನು, ನೀವು ನಾಯಿ, ಹಂದಿ ಅಂತೇಳಿ ಪದೆ ಪದೆ ಅವರ ಅಸ್ತಿತ್ವದ ಬುಡಕ ಕೈಹಾಕ್ತಿ ಅಂತ. (ಅವನ ಹತ್ತಿರ) ನಾಳೆ ಈ ಸೂಳಿಮಕ್ಕಳಿಗೂ ನಮ್ಮ ಅಸಲಿ

ಮರ್ಮ ಗೊತ್ತಾತಂದ್ರ ನಮ್ಮ ಬುಡಕ್ಕೆ ಕೊಳ್ಳಿ ಇಡ್ತಾರ.
ಲೇ ಸರ್ಪ.... ಹೂಂ, ನಿಮ್ಮ ಹಟ್ಟಿಯೊಳಗ ಹೊಸದೊಂದು ಮದ್ವಿ ಆತಂತ..... (ಬೋ ಖುಷಿಯಿಂದ) ಮಗನ, ಹಿಂದ ಒಂದು ಪಾಕೀಟ ಸರಾಯಿ ಕುಡಿಯಾನ ಹಟ್ಟಿ ಹೆಂಗಸರ ಸುದ್ದಿನೆಲ್ಲಾ ಚಾಚುತಪ್ಪದೆ ಬೊಗಳ್ತಿದ್ದೆ ಈಗ ಬಗಲಾಗ ಹಲ್ಲ ಬಂದಾವೇನು?

ಸರ್ಪ :– ಅದು ದಣಿ.....

ತೀಟೆಗೌಡ :– ಏನ್ಲೇ ಅದು.... ಊರಿನ ರಿವಾಜ ಮರ್ತೆ ಏನು?
ನಿಮ್ಮ ಹಟ್ಟಿಯೊಳಗ ಯಾರೇ ಮದ್ವಿಯಾದ್ರು ಪ್ರಸಾದ ಸ್ವೀಕರಿಸೋದು ನಮ್ಮ ಕಕಲಾಪುರದ ಹೀರೆಗೌಡನ ಮಗ ಸೊಳ್ಳೆಗೌಡತಾನೆ.

ಮಾರ :– ಅದು..... ಯಾವದು ಆಗಿಲ್ಲ ಬಿಡ್ರಿ....

ಸಣ್ಣೀರ :– ಬರೋಬರಿ, ಯಾರದು ಆಗಿಲ್ರೀಯಪ್ಪ.....

ಸೊಳ್ಳೆಗೌಡ :– ಯಾಕ್ರಲೇ.....ನಾಲಗಿ ತಡವರಸಾಕ ಹತ್ಯಾವ.
ಸುಳ್ಳ ಹೇಳಿದ್ರ ಸತ್ಯದ ತಲಿಮ್ಯಾಕ ರಪ್ಪಂತ ಹೊಡಿಬೇಕು ಹಂಗ ಹೇಳಬೇಕು. ನಿಮ್ಮಂತ ಸಿದಾಸಾದ ಮಂದಿಗ ಸುಳ್ಳಾ ಹೇಳಾಕ ಬರಲ್ಲಾ ಕಣ್ರಲೇ.

ತೀಟೆಗೌಡ :– ಸುಳ್ಳು ನಮ್ಮಂತೋರಿಗ ಶೋಭೆ ಕೊಡುತ್ತೆ ಕಣಲೇ ಸರ್ಪ.... ಅದೇ ನಿಮ್ಮ ಪೈಕಿನೆ ಹೊಟ್ಟಿ ಬೀರನ ಮದವೆ ಆಗಿರೋದು ಸುಳ್ಳೆನಲೇ....

ಸರ್ಪ :– ಛೇ, ಅದಾ ಮಾಡಾಕಂತ ಏನೋ ಹೋಗಿ, ಆಗದೆ ವಾಪಾಸ ಬಂದಾರ ಬುಧ್ಧಿ.

ಸೊಳ್ಳೆಗೌಡ :– ಖರೆ ಏನ್ಲೇ.

ಮಾರ :– ಹೌದ್ರಿ ದಣಿ. ಅಂವ ಯಾಕ ಸುಳ್ಳ ಹೇಳ್ತಾನ

ತೀಟೆಗೌಡ :– ಮಕ್ಕಳ್ರ ನೀವೆನಾರು ಸುಳ್ಳ ಹೇಳ್ತಿರೋದ ಖಾತ್ರಿಯಾತಂದ್ರ ಮೈಮ್ಯಾಲ ಚರ್ಮ ಇರಾಕಿಲ್ಲ ಹುಷಾರು.

ಸೊಳ್ಳೆಗೌಡ :– ಎಟದಿನಾಂತ ಸುಳ್ಳು ಹೇಳ್ಯಾರು. ಸತ್ಯ ಉರಿಯೊ ಬೆಂಕಿ ಹಂಗ ಜ್ವಾಲ ಹೊರಗ ಉಗಳುತ್ತೆ.

ಊರಿಗ ಬಂದಾಕಿ ನೀರಿಗ ಬರಾಕಿಲ್ಲಾ ಆವಾಗ ಈ ಮಕ್ಕಳ ಮಕ ಇಟ್ಕೊಂಡ ಅದೆಂಗ ತಿರಗ್ತಾರ ನಾಣು ನೋಡ್ತೀನಿ.

ಸರ್ಪ :- ಅದು ಒಡೆಯಾ....

(ಸ್ವಗತ) ಎಷ್ಟು ದಿನಾ ಈ ರೀತಿ ನಮ್ಮ ಹೆಂಡ್ರನ ಇವರತಾವ ಕಳಸೋದು. ಹೊಟ್ಟೆ ಬೀರ ನನ ತಮ್ಮ. ನಾವು ಗಂಡಸರ? ನಾಮರ್ದರು, ಹಿಜಡಾಗಳು ಈ ಸೂಳಿಮಗ ಗೌಡ ಅವನ ಹಾದರದ ಪಿಂಡಗಳನ್ನ ನಮ್ಮ ಹಟ್ಟಿಯೊಳಗ ಬಿಟ್ಟಾನ, ಅವು ಏನಾರು ಬಾಯಿಬಿಟ್ರ...

ಸೊಳ್ಳೆಗೌಡ :- ಏನ್ಲೆ ಅದು....

ಆಳು :- ಸರ್ಪ.... ಅವ್ವಾವ್ರ ಹಿಂದ ಕಣಕ್ಕ ಹೋಗಾಕಂತ ನಿನ್ನ ಕರ್ದವ್ರೆ....

ಸೊಳ್ಳೆಗೌಡ :- ಬೇವರ್ಸಿನನ ಮಗನೆ, ಬ್ಯಾರೆ ಯಾರು ಆಗಾಕಿಲಂತೇನು ಅಕೀಗ. ಈ ಫಮಗನೆ ಬೇಕಂತ!

ಆಳು :- ಬುದ್ದಿ ಅವ್ವಾರು ಸರ್ಪನ್ನ ಒದರು ಅಂದ್ರು ನಾ.....

ಸೊಳ್ಳೆಗೌಡ :- ಹೋಗಲೇ, ಅದೇನ ನೋಡು

ಸರ್ಪ :- (ನಿರ್ಗಮಿಸುವನು) ಬಗ್ಗಿ ನಮಸ್ಕಾರಮಾಡ್ತ, ಆತ್ರಿಯಪ್ಪಾ.

ತೀಟೆಗೌಡ :- (ಅವನು ಹೋಗುವುದನ್ನ ಕಾಯುತ್ತ ಸೈಡ್‌ವಿಂಗ್ ದಾಟುವವರೆಗೆ ಕಾದು ಹೋದದ್ದನ್ನ ಖಾತ್ರಿ ಪಡಿಸಿಕೊಂಡು)

ಅಲ್ಲ ಕಣ್ಲೆ ಸೊಳ್ಳೆಗೌಡ, ನೀ ಹೊಲ ಮೇಯೊ ಗೂಳಿ..... ಇಂವಽ ಏನಾರ... ನಿನ್ನ ಮನಿಯೊಳಗ ಮೇಯಾಕ ಹತ್ಯಾನೇನಮತ್ತ.

ಸೊಳ್ಳೆಗೌಡ :- (ಸಿಟ್ಟಿಂದ) ತೀಟೆಗೌಡ...... ಏನಮಾತಾಡಕ ಹತ್ತಿ ಅನ್ನೊ ಖಬರೈತೇನ ನಿಂಗ.

ತೀಟೆಗೌಡ :- ಅಲ್ಲಾ...... ನಾನು ಹಂಗೆ ಲೋಕಾರೂಢಿ ಅಂದ್ನಪ್ಪ... ಅದಕ್ಕ ಯಾಕ ಸಿಟ್ಟಿಕ್ಕಿ.

ಸೊಳ್ಳೆಗೌಡ :- ಈ ಮಕ್ಕಳು ಕಣ್ಣೆತ್ತಿ ನಮ್ಮ ಹೆಂಗಸ ಮಾರಿ ನೋಡಾಕು ಅವಳೇನು ಮಾಡೇ ಬಿಡ್ಲು ಅಂದ್ನೆ? ನಮ್ಮ ಅಪ್ಪಣೆಕಾಯೋರು. ಅವರನ್ನ ಆಳ್ತಾರೇನಲೇ. ನಮ್ಮ ಹೆಂಗಸರ ಪಾದ ನೋಡಿ ಪಾವನ ಆಗೋ ಈ ಪೀಕಲು ಮಂದಿಗ ಉಟ್ಟಸೀರಿಯೊಳಗ ಅಡಗಿರೋ

ಅಪ್ಸರೆಯರ ಸೌಂದರ್ಯ ಉಹೂಂ... ಅಸಾಧ್ಯ. ಒಂದದಪ ಹಂಗೇನಾರ ಆತು ಅಂತ ಇಟ್ಕ ಯಾರು ಜೀವ ಸಹಿಂತ ಉಳಿಯಂಗಿಲ್ಲ.

ತೀಟೆಗೌಡ :- ಅಲ್ಲಾ, ಹೌದು. ಅದು ಸರಿ ಅನ್ನು.
ಆದ್ರೂ ಹೆಂಗಸನ್ನುವ ಮಾಯಾಂಗನೆ ಎಂಥೆಥ ಹಠವಾದಿಗಳಿಗೆ ಮೂಗುದಾರ ಪೋಣಿಸಿ ಹದ್ದು ಬಸ್ತಿಗೆ ತಂದಿರುವ ಉದಾರಣೆಗಳದಾವು ನೀ ಅಲ ಏಟ್ರವ.

ಸೊಳ್ಳೆಗೌಡ :- ನೋಡು ನೋಡು ನೀ ಹಿಂಗ ಅನುಮಾನದ ಹುಳಾನ ನನ್ನ ತಲಿಯೊಳಗ ಬಿಡಾಕ ಹೋಗಬ್ಯಾಡ ನೋಡು. ಸುಮ್ಮನೆ ಅನುಮಾನದ ಹುತ್ತನ ತಲಿಯೊಳಗ ಹೊತ್ಕೊಂಡು ಸುಖ ಅನುಭವಿಸೋದಕ್ಕೆ ಆಗಾಕಿಲ್ಲ. ಹೋಗು ಆ ಹೊಟ್ಟೆಬೀರ ಮದ್ವಿ ಯಾಗಿರೋದನ್ನ ಖಾತ್ರಿ ಮಾಡ್ಕ. ಮದ್ವಿ ಅವನದು, ಪ್ರಸ್ತ ನಂದು.

(ನಿರ್ಗಮನ)

* * *

ಸನ್ನಿವೇಶ–೩

(ಸರ್ಪ ದೂರದಲ್ಲಿ ಮೌನವಾಗಿ ನಡೆಯುತ್ತಿದ್ದಾನೆ ಹರಿದ ಮೈ ಯಂಗಿಯಿಂದ ಹೊರಗೆ ಕಾಣ್ತಿರೊ ಮಾಂಸ ಕಂಡಗಳನ್ನು ಆಶಿಗಣ್ಣಿಂದಲೆ ನೋಡ್ತ ನಾನಾವಿಧದಲ್ಲಿ ಅವನನ್ನು ಪ್ರಚೋದಿಸಲು ಹವಣಿಸುತ್ತಾ)

ಶರ್ಮಿಳ :– ಮಾನಿಯಾಗ ನೂರಮಂದಿ ಜೀತದುಡಿತಾರ, ಅದ್ರಾಗ ನೀನು ಒಬ್ಬ. ಆದ್ರ ನೀ ಮಾತ್ರ ನೂರ ಮಂದಿಗಿಂತ ಬ್ಯಾರೇನ ಅದಿ. ದಿನ ರಾತ್ರಿ ಚಂದ್ರ ಚೆಲುವ ಮಲ್ಲಿಗಿ ಬೆಳಕಿನ್ಯಾಗ ನನ್ನ ಕೂಡ ನನ್ನ ಕಟ್ಕೊಂಡಿರೋ ಗಂಡ ಇರಲ್ಲಾ. ಯಾಕಂದ್ರ ಅವನಿಗೆss ಊರಾಗ ಅತಿ ಸುಂದರವಾದ ಹೇಣ್ತಿ ಬೇಕು. ಅಕಿ ಪಂಜರದ ಗಿಣಿಯಾಗಿರಬೇಕು ಆಟೇಯ. ನನ್ನ ನೆನಪ ತುಂಬ ನೀ ಸರಸ ಆಡ್ತಿ. ಯಾಕ?

ಸರ್ಪ :– ಅವ್ವಾರ ಏನಾಗೈತಿ ನಿಮಗ. ಮೈಗ ಹುಷಾರಿಲಿಕ್ರ ದವಾಖಾನಿಗಾರ ಹೋಗ್ರಿ.

ಶರ್ಮಿಳ :– ಮೈಗ ಹುಷಾರಿಲಕ್ರ ನಾ ಕಾಳಜಿ ಮಾಡ್ತಿರಾಕಿಲ್ಲ ಮನಸ್ಸಿಗ ಹುಷಾರಿಲ್ಲ

ಸರ್ಪ :– ಮನಸ್ಸಿಗ.... ಅದಕ್ಕೇನಪ್ಪ ಔಷಧಿ...
ಹಾಂ.... ನಮ್ಮ ಹಟ್ಟಿ ವಿರ್ಪಜ್ಜ ಮಂದಿ ಮನಸು ಖುಷಿ ಪಡಸಾಕ ಒಂದ ಔಷಧಿ ಕೊಡ್ತಿದ್ದ.

ಶರ್ಮಿಳ :– ಊಹೂಂ.... ಮನಸ್ಸಿಗ ಔಷದಿ...
ಕೊಡು ನೋಡಮ....

ಸರ್ಪ :- ನಟ್ಟ ನಡು ಹಗಲೊತ್ತು, ಮಂದಿ ಅಡ್ಡಾಡೊವ್ಯಾಳೆ .....

ಶರ್ಮಿಳ :- ಈ ಜಾಗದಾಗ ನರಪಿಳ್ಳೆ ಬರಾಣಿಲ್ಲ. ಇದು ಹಿರೇಗೌಡನಮಗ ಸೊಳ್ಳೆಗೌಡ ಸ್ಥಾಪಿಸಿರೊ ಸ್ವಯಂ ಘೋಷಿತ ನರಕ. ಹೂಂ....ಕೂಡು.

ಸರ್ಪ :- (ವಿರ್ಪಜ್ಜನ ಏಕತಾರಿ ಹಾಡಿನಲ್ಲಿ ಮಗ್ನನಾದ)

ಕಾಡು ಮಲ್ಲಿಗೆಯೊಂದು ಕಣ್ಣ ಮುಂದೆ ಬಂದು
ಕಾಡತದ ನೆನಪಾಗಿ
ಕಪ್ಪು ಕಣ್ಣಿನವಳು ಕಾಮನಬಿಲ್ಲಂತ ಮೈಯಳು
ಬಾಣಬಿಡುತಾಳ ಕಣ್ಣಿಂದ

ಕಲ್ಲಕವಣಿಏಟು ಕೊಟ್ಟವರಾರು
ಕವಳಿ ಹಣ್ಣತಿಂದಂಗ ಮನದಾಗ
ಮಾಸಲಿಲ್ಲಾ ಹಳೆ ನೆನಪು
ಮಾಗಿಯ ಮಳೆ ಮುಗಿಲ ತೂತು ಕೊರೆದಂಗ

ಶರ್ಮಿಳ :- (ಉದ್ವೇಗಕ್ಕೊಳಗಾಗಿ) ನಿಲ್ಸು...
(ಮಾತೆಬಾರದೆ ಅವನ ಕರಿಮೈಯಾನ್ನೆ ನೋಡ್ತಾ ಯಾವುದೋ ಲೋಕದಲ್ಲಿ ವಿಹರಿಸ ತೊಡಗಿದ್ದಾಳೆ)

ಸರ್ಪ :- ಅವ್ವಾರ..... ಏನಯ್ತು, ಯಾಕಿಂಗೆ
(ಅವನ ಮಾತು ಬಾಯಲ್ಲಿದ್ದಂಗೆ)

ಶರ್ಮಿಳ :- (ಅವನನ್ನ ಅಪ್ಪಿಕೊಳ್ಳಲು ಮುಂದಾಗುವಳು)
ಏಯ್.... ಬಾರೋ.... ಹೃದಯಕ್ಕ
ಚೂರಿಹಾಕಿ ಏನಾಯ್ತು ಅಂತಿಯಾ....

ಸರ್ಪ :- (ಕೊಧರಿಕೊಂಡು ಓಡುವನು) ಇದು ಮಂದಿ ಅಡ್ಡಾಡೊ ಜಾಗ ಕಣವ್ವ, ನನ್ನ ನೀವು ಮುಟ್ಟೋದೆನಾರು ಮಂದಿ ಕಂಡ್ರು, ಅಂತಂದ್ರ ಕತಿಮುಗಿತು. ಗೌಡ್ರು ಹೆಡಮುರಗಿಕಟ್ತಾರ.

ಶರ್ಮಿಳ :- ಲೇ ಸರ್ಪ, ನೀ ಹಿಂಗ ತಪ್ಪಿಸಿಕೊಂಡೆ ಅಂದ್ರ ನಾನ ಗೌಡಗ ಹೇಳ್ತಿನಿ.

ಸರ್ಪ :- ಯಾಕ್ರವ್ವ, ಬದುಕೆ ಇಲ್ಲದ ನಮ್ಮಂತ ಅಸಹಾಯಕರಿಗೆ ಹಿಂಸೆ ಕೊಡ್ತೀರಾ.

ಶರ್ಮಿಳ :- ಅದು ನನ್ನ ತಪ್ಪಲ್ಲ, ಕರಿಬಂಡೆಯ ಮೇಲೆ
ಅಂಗಾತ ಮಲಗಿ ಸುಖ ಅನುಭವಿಸಬೇಕು
ಅನ್ನೋದು ನನ್ನ ಬಯಕೆ ಅದಕ ನಾನೇನು ಮಾಡ್ಲಿ

ಅನ್ನಿದ್ರ ತಗೊಳಿ ಈ ಮಚ್ಚನ್ನ, ಹಂಗೆ ಒಂದೇ ಹೊಡ್ತಕ ಕೊಚ್ಚಿ ಹಾಕ ಬಿಡ್ರಿ....

ಶರ್ಮಿಳ :- (ಸ್ವಗತ) ಛೇ, ಎಂಥ ವಿಪರ್ಯಾಸ. ಅಂಗೈಯಲ್ಲಿರೊ ಸುಖಾನ ಅನುಭವಿಸೋಕ ಆಗ್ತಾನೆ ಇಲ್ವಲ್ವಾ. ಮದುವೆಯಾಗಿ ಕಟ್ಕೊಂಡ ಬಂದ ನಾಮರ್ದಗಂಡ ನನ್ನ ಮುಟ್ಟಿ, ಮೈ ಮೂಳೆಯನ್ನ ಮುರಿಯಲೇ ಇಲ್ಲ..... ಹೆಣ್ಣನಾಯಿಗಳ ಹಿಂದೆ ಜೊಲ್ಲುಸುರಸ್ತಾ ಅಡ್ಡಾಡೋ ಗಂಡನಾಯಿಹಂಗೆ ಮಂದಿ ಹೆಂಡ್ರ ಹಿಂದೆ ಸುತ್ತಾಡಿ ರಾತ್ರಿ ಮಾರಿ ಹೊಳ್ಳಸಿ ಮಲಗಿಬಿಡ್ತಾನ. ಹರೆಯದ ಕುದುರೆಯಂತೆ ಲಂಗು ಲಗಾಮಿಲ್ಲದೆ ಓಡುವ ಬಯಕೆಗಳನ್ನ ತಡೆಯೋಕೆ ಆಗದೆ....

ಲೋ :- ಸರ್ಪ, ಬಾಯಿಮುಚ್ಕೊಂಡು ನಾನು ಹೇಳದಂಗೆ ಕೇಳು.

ಸರ್ಪ :- (ಅರೆ ಬತ್ತಲಾದ ಅವಳ ಮೈಯನ್ನ ನೋಡಿ ಸ್ತಂಭಿಭೂತನಾಗಿ) ಛೇ, ಎಂಥ ಸಂದಿಗ್ಧ ಸ್ಥಿತಿ. ಜಾತಿಯ ಉರಿಜ್ವಾಲೆಯಲ್ಲಿ ಬೇಯುತ್ತಿರುವ ನಮ್ಮಂತ ಕೀಳು ಮಂದಿ ಇಂಥ ಸೌಂದರ್ಯದ ರಾಶಿ ಎದರಿಗಿದ್ದರು ಮುಟ್ಟಲಾಗದ ಸನ್ನಿವೇಶ....
ಮುಟ್ಟಿದರೆ ಸುಟ್ಟುಹೋಗುವ ಆತಂಕ....
ಯಾರಾದರು ನೋಡಿದರೆ ನನ್ನ ಜೀವಹೊಂದಂತೆ ಸರಿ.

ಶರ್ಮಿಳ :- ನೋಡು ನೀನಾಗಿ ನೀನೇ ಒಪ್ಪಿಕೊಂಡೆಯೋ ಸರಿ ಇಲ್ಲದಿದ್ದರೆ. ನಾನೇ ನೀನು ಹಿಡ್ಕೊಳ್ಳೋದಕ್ಕೆ ಬಂದೆ ಅಂತೇಳಿ....

ಸರ್ಪ :- ಅಲ್ಲ ಅವ್ವಾರ, ನನ್ನ ಹತ್ರ ಅದೇನಿದೆ ಅಂತೇಳಿ ನನ್ನ ಹಿಂದೆ ಬಿದ್ದಿರಿ ಅಂತ. ನನ್ನ ಕರಿಮೈಯನ್ನ ನೋಡಿ ನಮ್ಮ ಹೆಣ್ಣು ಹೈಕಳೆ ಮೂಗು ಮುರಿತವೆ.

ಶರ್ಮಿಳ :- ಯಾವಳವಳು? ಕರಿಜಾಲ ಕೆಚ್ಚಿನಂತ್ರ ನಿನ್ನ ಮೈ ನೋಡಿ ಮೂಗ ಮುರದ ನನಸೌತಿಯಾವಳ ಅವಳು? ಬಾಡಂತಿಪ ಕೊಬ್ಬಿರೊ ಇಂತಹ ಬಲವಾದ ಬಾಹುಗಳಲ್ಲಿ ಒಂದೇ ಒಂದ ಸಲ ಅಪ್ಕೊಂಡ್ರೆ ಬದುಕೆ ಸಾರ್ಥಕ ಅಂತ ನಮ್ಮಗಲ್ಲಿ ಹೆಂಗಸರು ಮಾತಾಡ್ಕೊಳ್ತಾರ.

ಸರ್ಪ :- ಅಲ್ಲಾ ಬಡವರ ಜೀವದ ಕೂಡ ಹುಡಗಾಟ ಆಡೋದ್ರಲ್ಲಿ ಅದೇನ ಸುಖಸಿಕ್ಕಿತ ನಿಮಗ ಅಂತೀನಿ. ನಿಮ್ಮಂತ ಮನಸ್ಸೆ ಇಲ್ಲದ ಕಲ್ಲು ಹೃದಯದ ಮಂದಿಗ ನಮ್ಮ ಇಷ್ಟ-ಕಷ್ಟ ಹೇಗ ತಿಳಿಯಾಕ ಸಾಧ್ಯ. ನಾವು ಹುಟ್ಟಿದ್ದೆ ನಿಮಂತೋರ ಇಷ್ಟದಂಗ ನಡಿಯಾಕ.

ಸರ್ಪ :- ನೀವು ದೊಡ್ಡ ಮಂದಿ, ದಿಕ್ಕೆ ಇಲ್ಲದ ನಮ್ಮಂತೋರ ಕೂಡ.... ಹಿಂಗ ಚೆಲ್ಲಾಟ ಆಡಬಾರದು. ನಾನು ಬದುಕಿರೋದು ನಿಮಗೇನಾರು ಬ್ಯಾಡ

ಶರ್ಮಿಳ :- ಎಯ್, ಕೇಳೊ ನನ್ನ ದೊರೆ. ಕೆಸರಲ್ಲಿತಾನೆ ತಾವರೆ ಅರಳೋದು. ನಮ್ಮ ವಾಡೆಯೊಳಗ ಏನೈತೆ? ರಾತ್ರಿ ಪ್ರಶಾಂತ ಮೌನದೊಳಗೆ ಸುಖವೇ ಸಿಗದ ಈ ಮೈ ಮನಸ್ಸಿಗೆ ಮುಲಾಕ ಬಿಟ್ಟರೆ ಇನ್ನೇನು ಸಿಕ್ಕಿತು ಹೇಳು. ಸೌಂದರ್ಯ ಇರೋದೆ ಹಟ್ಟಿಯಲ್ಲಿ, ಲಂಬಾಣಿ ತಾಂಡದಲ್ಲಿ. ಅದನ್ನೂ ಬಿಡಿಸಿ ಹೇಳಬೇಕೇನು? ಕೇಳ ಹಂಗಾರ. ರೂಪ್ಲಿ, ಕೆಂಚಿ ಪಾರಿ, ಪದ್ದಿ, ದಿಮ್ಮಿ ಇವರೆಲ್ಲಾ ಯಾರು? ಯಾಕ ಗೌಡನ ಆಶೆಗೆ ಬಲಿಯಾದ್ರು

ಸರ್ಪ :- ಅವ್ವಾರ ಅವರು ದೊಡ್ಡಮಂದಿ. ಸೊಳ್ಳೆಗೌಡ್ರು ಅಂದ್ರ ಸುತ್ತ ಹರದಾರಿಯೊಳಗಿರೊ ಹಳ್ಳಿ ಮಂದಿ ಎದಿಯಾಗ ಸಣ್ಣಗ ನಡಕ ಹುಟ್ಟೈತಿ. ಅಂತಾದ್ರಾಗ, ನನ್ನ ಮುಟ್ಟು ಅಂತ ಹೇಳ್ತಿರಲ್ಲಾ. ಒಂದ ಕೆಲ್ಸಮಾಡಿ, ನಂತಾವ ಇವತ್ತು ಗುದ್ದಬಾಕಿಲ್ಲ. ಯಾವಾಗ್ಲೂತಗೊಂಡೆ ಅಡ್ಡಾಡ್ತಿದ್ದೆ. ಇವತ್ತು ಅದೆಂಗೊ ಮರ್ತ ಬಂದೀವ್ನಿ. ಹಾಂ, ನಾಳೆ ತರತೀನಿ, ಹೊಟ್ಟೆಯೊಳಗ ಚುಚ್ಚಿ ಕರಳ ಬಗದು ಸಾಯಿಸಿಬಿಡ್ರಿ, ಆದ್ರ ಈ ಕೆಲ್ಸಕ ಮಾತ್ರ ನನ್ನ....

ಶರ್ಮಿಳ :- ನೀ ನನ್ನ ಮುಟ್ಟಿದಿದ್ರೂ ಸಾಯ್ತಿಯಾ.

ಸರ್ಪ :- ಅವ್ವಾರ, ಯಾಕಿಂಗೆ ಬಡವರ ಜೀವದ ಜೊತಿಗ ಆಟ ಆಡೀರಿ. ನಾನೇನು ಅಂತ ತೆಪ್ಪಮಾಡೀನಿ ಅಂತ.

ಶರ್ಮಿಳ :- ಒಮ್ಮೆ ನನ್ನ ದೇಹದ ಸುಂದರವಾದ ಆಕೃತಿಯನ್ನ ನೋಡು. ಇದನ್ನ ನಿಮ್ಮ ಸೊಳ್ಳೆಗೌಡ; ಅಂದ್ರೆ ನಿನ್ನ ಧಣಿ ಯಾರಿಗೂ ಇಲ್ಲದ ಸೌಂದರ್ಯ ಗೊಂಬೆ ತನ್ನ ಮನೆಯೊಳಗೆ ಅಂದಕ್ಕ ಇರಬೇಕು ಅಂತ ತಂದಾನ. ಆದ್ರ ನನಗೂ ಕನಸದಾವ, ಮನಸನ್ನೋದೈತೆ. ಬಯಕೆ ಐತೆ. ಅದು ಬಿಡು, ಜೀವ ಐತೆ ಅಂತ ತಿಳಿದೇ ಇಲ್ಲಾ. ನಾ ಯಾರ ಮುಂದ ನನ್ನ ಎದಾಯಾನ ವೇದನೆ ಹಂಚ್ಕೊಳಲಿ ಹೇಳು.

ಸರ್ಪ :- ನಿಮ್ಮ ಓಣಿಯೊಳಗ ಎಂಥೆಂಥ ಗಂಡಸರು ಆದಾರ ಅವರಿನ್ನೆಲ್ಲಾ ಬಿಟ್ಟು, ಬೇವರ್ಸಿಗಳಾದ ನಮ್ಮಂತೋರ ಹಿಂದೆ ಯಾಕ ಬಿದ್ದಿರಿ ಅಂತೀನಿ. ನಮ್ಮತಾವ ನಿಮಗ ಕೊಡಾಕು ಏನೈತೆ ಹೇಳಿ. ಗೌಡ್ರು ಲಕ್ಕಿಮನಿಗ ಏನೆಲ್ಲಾ ಕೊಟ್ರು. ಸೇವಿಬಾಯಿ ಸೌಂದರ್ಯಕ ಮುಳ್ಳಾಗಿ ಹತ್ತೆಕ್ಕರಿ ಜಮೀನೆ ಕೊಟ್ರು.

C-13

ಶರ್ಮಿಳ :- ನನಗ ಅವೆಲ್ಲಾ ಬ್ಯಾಡ ನೀನ ಬೇಕು. ನೀನು (ಅವನನ್ನ ಹಿಡಿಯಲು ಓಡಾವಳು, ಅವನು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿ ವಿಫಲನಾಗುತ್ತಾನೆ) ಈ ಹೆಣ್ಣು ಮನಸ್ಸು ಮಾಡಿದರೆ ಜಗತ್ತನ್ನೆ ಮೇಲೆ ಕೆಳಗೆ ಮಾಡತಾಳೆ ಅನ್ನೋ ಸಣ್ಣ ಸತ್ಯ ಗೊತ್ತಿಲ್ಲೇನೊ ಬೇವಕೂಪ.

ಸರ್ಪ :- ಬಿಡಿ,..... ನಿಮಗೆ ಕೈ ಮುಗಿತೀನಿ. ನಾನು ಬಹಳ ಸಣ್ಣ ಮನುಷ್ಯ... (ಏನೋ ಸದ್ದು) ಯಾರೋ ನೋಡ್ತಿದ್ದಾರೆ.....

ಇನ್ನೂ ನನ್ನ ಕತೆ...

* * *

ದೃಶ್ಯ–೨
ಸನ್ನಿವೇಶ–೧

ಸಂಕಜ್ಜಿ :– ಹಾಳಾದ ದ್ಯೇವ್ರು ನನ್ನ ಬಂಜೆನಾರು ಮಾಡಲಿಲ್ಲಾ. ಸೊಳ್ಳೆಗೌಡನ ಅಪ್ಪ ಭೀಮನ ಗೌಡನ ಕಣ್ಣುತಪ್ಪಿಸಿ ಅದೆಂಗೊ ಬದಕ ಕಟ್ಕೊಂಡು, ಸರ್ಪ ಹುಟ್ಟಿದ ಮ್ಯಾಲ ಹಟ್ಟಿ ಬಿಟ್ಟ ಹೊರಗ ಬಂದಿದ್ದೆ. ಆದ್ರ ನನ್ನ ಮ್ಯಾಲಿನ ಸೇಡಿಗ ನನಮಗನ್ನೆ.

ದಿಂಡ :– ಯಮ್ಮ ಯಾವದೋ ಅವ್ಯಕ್ತವಾದ ಸತ್ಯನ ಯಾಕಿಂಗ ನನ್ನಿಂದ ಮುಚ್ಚಿಡಾಕ ಹತ್ತಿ ಅಂತ.

ಸಂಕಜ್ಜಿ :– ಥು, ನಿನ ಬಾಯಗ ನನತೊಮ್ಲುಹಾಕ, ನಾ ಏನ್ಲ ಅಂತ ಸತ್ಯ ಮುಚ್ಚಿಡೋದು.

ದಿಂಡ :– ನೀ ಬೋ ಘಾಟಿಮುದ್ಕಿ. ಹೇಳಬೇ ಏನಾತು.

ಸಂಕಜ್ಜಿ :– ಯಾರಿಗ?
ಯಾವಾಗ?

ದಿಂಡ :– ಯಮ್ಮ, ಇವತ್ತಲ್ಲ ನಾಳೆ, ನೀ ಏನು ಹೇಳದಂಗೆ ಮುಚ್ಚಿಟ್ಕೊಂಡಿಯೋ ಅದು ಹೊರಗ ಬಂದೆ ಬರತೈತೆ.

ಸಂಕಜ್ಜಿ :– (ಸ್ವಗತ) ಅದನ್ನೆ ತಾಯಿ ನಾನು ಆಗಬಾರದು ಅಂತೇಳಿ ಊರಮುಂದ್ಲ ಗುದ್ದವನ್ನ ಗುಡಿಗ ದೀಪ ಹಚ್ತಿರೋದು.

ದಿಂಡ :– ಏನಂದೆ.

ಸಂಕಜ್ಜಿ :- ಹೇಳಾಕ ಏನ ಉಳದೈತೆ ಹೇಳು. ನಮದು ಒಂದ ಥರ ಪಡಿಪಾಟ್ಲು.

ದಿಂಡ :- ನೀ ಯಾಕ ಹಿಂಗ ಎಲ್ಲಾ ಮಾತಗಳನ್ನ ಒಗಟಾಗೆ ಮಾತಾಡ್ತಿಯಾ? ಅಲ್ಲ ಸತ್ಯ ತೆಳ್ಳಗಿನ ಬಿಳಿ ಬಟ್ಟೆ ಇದ್ದಂಗೆ, ಯಾವಾತ್ತಾರುವೆ ಗೊತ್ತಾಗೆ ಆಗುತ್ತೆ ನೀ ಏನು ಹೇಳೋದು ಬೇಕಾಗಿಲ್ಲ.

ಸಂಕಜ್ಜಿ :- (ಸ್ವಗತ) ಎಲ್ಲಾನನ್ನ ಹಣೆಬರ. ಆ ದ್ಯಾವ್ರು ಹಾಳಾದ ಈ ಜಾತಿಯೊಳಗ ಯಾಕಾರು ಹುಟ್ಟಿಸಿದ್ನೋ ಅಂತೀವ್ನಿ. ಯಾ ಬೊಳಿಮಗನ ಕೇಳು ಜಾತಿ ಅಂತಾನೆ ಮಾತಾಡ್ತಾನೆ.

ಏನ್ಲಾ ಮಗ, ಅದೇನೊ ಪ್ಯಾಟಿಯೊಳಗ ಕೆಲ್ಸ ಸಿಕ್ಕೈತೆ ಹೋಯ್ತಿನಿ ಅಂತಿದ್ದೆ.

ದಿಂಡ :- ಅಲ್ಲಬೇ, ನಿನೊಬ್ಬಾಕಿನ ಇಲ್ಲಿ ಬಿಟ್ಟು ನಾ ಅಲ್ಲಿಗೆ ಹೋಗಿ ಕಡದು ಗುಡ್ಡೆ ಹಾಕೋದು ಅಟ್ಟಗೆ ಐತೆ.

ಸಂಕಜ್ಜಿ :- ನಂದೇನ ಮಗ ಮೋಟ ಮರಗಾಳಿ ಮಿಂಡ ಅಂದಂಗೆ. ಒಳಗಿ ಗೆದ್ಲಿ ಹಿಡದೈತೆ, ಇವತ್ತೋ ನಾಳೆ ದೊಡ್ಡ ಬಿರುಗಾಳಿ ಬೀಸಿದ್ರೆ ಬುಡಮೇಲಾಗಿ ಬೀಳುತ್ತೆ. ಇನ್ನೂ ಭಾಳಕಾಲಬಾಳಿ ಬದಕಬೇಕಾದೋನು ನೀನು.

ದಿಂಡ :- ಏ, ಮುದುಕಿ ನೀ ಈಗಲೆ. ಸಾಯಂಗಿಲ್ಲ ಇನ್ನೂ ಏನೆಲ್ಲಾ ನೊಡೋದಿದೆ.

* * *

C-9

ಸನ್ನಿವೇಶ–೨

ರಂಗೆಗೌಡ :- (ಕೈ ಕಟ್ಟಿಕೊಂಡು ಆ ಕಡೆಯಿಂದ ಈ ಕಡೆಗೆ ಆಡ್ಡಾಡ್ತವ್ನೆ) ಎಂಥ ಸುದ್ದಿ ತಂದಿಯಲೆ ಮಾರ. ಸೂಳಿಮಗ ಸೊಳ್ಳೆಗೌಡ ನಾಡ ಹೆಂಗಸರ ಹಿಂದೆ ಬೀಜದ ಹ್ಹೋರಿ ಹಂಗೆ ಸುತ್ತಾಡ್ತಿದ್ದ...

ಸಣ್ಣಗೌಡ :- ಒಬ್ಬ ಕೆಳಜಾತಿಯವನು....

ಥು ಅವನವ್ವನ.... ಊಹಿಸಿಕೊಳ್ಳಾಕ ಆಗಂಗಿಲೇ ರಂಗ.

ಗುಂಡೆಗೌಡ :- ಹಂಗೆಕಣ್ಣಲೇ ನನ್ನತಾವ ಶಕ್ತಿ ಐತೆ ನಡಗಟ್ಟಿ ಐತೆ ಅಂತಂದು ತಾಂಡ, ಊರು ಒಂದು ಬಿಡದ ಸುತ್ತಾಡಿದ್ರ. ಮದ್ಲು ಮನಿಯಾನ ಹೆಣ್ಣನ ಆಳ್ರಲೇ.

ರಂಗೇಗೌಡ :- ಲೇ ಸಣ್ಣಪ್ಪ, ಅವತ್ತು ಮದ್ವಿಯೊಳಗ ನಾ ಅಂದ್ಕೊಂಡಿದ್ದೆ. ಹಿಂಗ ಅಕೈತಿ ಮುಂದೊಂದ ದಿನಾ ಅಂತ ತಗಳಪ್ಪ ಹಂಗೆ ಆತು.

ಮಾರ :- ಅಂತು ಸರ್ಪ ಅದೇನೊ ಅಂತಾರಲ್ರಿಯಪ್ಪ ಸರ್ಗ.... ದೇವಿಂದ್ರ, ಅವನ ಆಸ್ಥಾನದಾಗ ಕುಣಿತಾವಂತಲ್ರೀ.

ರಂಗೇಗೌಡ :- (ಮೀಸೆತಿರವುತ್ತ ಅವನ ಕಡೆ ಕೆಟ್ಟ ಕಣ್ಣಿಂದ ನೋಡಿ ಸಹಿಸಲಾಗದೆ) ಲೇ ತಿರಪೆ ನನಮಕ್ಕಳ ಕೊಚ್ಚೆ ಗುಂಡಿಯೊಳಗ ಎಮ್ಮಿ ಮಣಕ ಉಲ್ಡಾಡದಂಗೆ ನಾವು ಎರಡಕ್ಕ ಕುಂದ್ರೊ ದಕ್ಷಿಣ ದಿಕ್ಕಿನೊಳಗ ಗುಡಸಲ ಕಟ್ಕೊಂಡು ನಾವು ಪಾಯಿಖಾನೆ ಮಾಡೊ ಜಾಗದ ಬದಕಿರು ಕ್ರಿಮಿಕೀಟಗಳಂತ ನಿಮಗ...

ಮಾರ :- ಎಯ್, ಒಂದಪ ಹೇಳಿಬುದ್ಧಿ

ಸಣ್ಣಗೌಡ :- ಯಾರಲೇ ಅಕೀ.....
ರಂಭೆ, ಊರ್ವಸಿ. ಮೇನಕೆ ಏನಲೆ.

ಮಾರ :- ಹಾಂ... ಅವರೆ ಕಣಬುದ್ದಿ. ನಮ್ಮ ದೊಡ್ಡಾಟದ ಮಾಸ್ತರ ಹುಸೇನಸಾಬು ಒಮ್ಮೆ ಇಸ್ವಾಮಿತ್ರ ನಾಟಕ ಆಡಿಸಬೇಕಾರ ನಮ್ಮಟ್ಟಿಯೊಳಗ ಹೇಳಿದನೆಪ್ಪು.

ಗುಂಡೇಗೌಡ :- (ಸಣ್ಣಗೌಡ ಕಡೀಗ ಸನ್ನೆ ಮಾಡಿ) ಈ ಹಡಬಿ ಮಗನೇನ ಕಮ್ಮಿ ಅಲ್ಲಪ್ಪೋ ನಮ್ಮ ಹೆಂಗಸರು ಅಪ್ಪಿತಪ್ಪಿ ಕಂಡ್ರ ಹಾರಿಸಿಕೊಂಡ ಹೋಗೊ ಪೈಕಿ. ಹುಷಾರಲೇ ರಂಗ್ಯ. ಸೂಳಿಮಗನ ಮನ್ನೆನಾರ ಮದ್ವಿಯಾಗಿ.

ರಂಗೇಗೌಡ :- ಹೊಸಲ ದಾಟಿದ್ರ ಕಾಲ ಕತ್ತರಿಸಿ ಹಾಕಿ ಬಿಡ್ತಿನಿ. ಅಷ್ಟಕು ನಾ ಏನ ಸೊಳ್ಳಿಗೌಡ ಅಂದ್ಕೊಂಡೇನ. ಈ ಮಗ ಏನಿದ್ರು ಹಿತ್ಲದಾಗ ಚಪ್ಪಲಿ ಬಿಡೊತಾವ ಬೇಡ್ಕಂಡು ತಿನ್ನಬೇಕು.

ಸಣ್ಣೆಗೌಡ :- ಇವತ್ತು ಅವನ ಹೆಣ್ತಿ. ನಾಳೆ?

ಗುಂಡೆಗೌಡ :- ಅನುಮಾನಯಾಕ, ಇದು ಹಕಿಕತ್ರಲೆ ಹಕಿಕತ್ತು.

ರಂಗೇಗೌಡ :- ಥು, ನನಮಗಂದು ಇದೊಂದ ಬಾಳ. ಆ ಮಗ ಸರ್ಪಗೆ ಸೊಳ್ಳೆಗೌಡ ಬಾಳ ಸದರ ಕೊಟ್ಟ ಬಿಟ್ಟ. ಅದಕ್ಕ ಅಂವ್ನ ಪಡಸಾಲಿ ಮಟಾನು ಹ್ವಾದ. ಮುಂದ ದೇವರಮನಿಗು ನುಗ್ಗದ.

ಸಣ್ಣೆಗೌಡ :- ಯಾಕ ಅಡಗಿಮನಿಗ ಹೋಗಿಲ್ಲ ನೋಡ. ಏನ ಗ್ಯಾರಂಟಿ?

ಗುಂಡೆಗೌಡ :- ಅದು ಸರಿನ.

ರಂಗೇಗೌಡ :- ಅಲ್ವಪ್ಪಾ, ಅಂಥ ಪ್ರಸಂಗ ಬಂದಿದ್ರ ನಮ್ಮ ಓಣಿಯೊಳಗ ನಾವೇನು.....

ಗುಂಡೇಗೌಡ :- ಮತ್ತದ ಆಗದ ಮಾತು. ಹೆಣ್ಣು ಅಷ್ಟು ಸುಲಭವಾಗಿ ಒಲಿಯೋದಿಲ್ಲ ಕಣಲೆ. ಅವಳಾಗಿ ಅವಳೆ ಬಂದ್ರ, ಅದೃಷ್ಟ. ನೀ ಹೋಗಿ ಮೈಕೈ ಮುಟ್ಟಿದ್ರ ಮಾನಭಂಗ. ಪಾಪ ಎಷ್ಟೋ ಕೆಳಜಾತಿ ಹೆಂಗಸರ ಮಾನಬಂಗ ಮಾಡಿದ್ನೊ..... ಅವರ ಉಸರು ತಟ್ಟಿದಂಗ ಇರಾಕ ಸಾಧ್ಯ ಏನು?

ಸಣ್ಣಗೌಡ :- ಛೆ, ಎಂಥಾಮಾತುಂತ ಆಡ್ತಿ ಗೌಡ್ರ ಕೆಳಜಾತಿ ಹೆಂಗಸರು ಇರೋದೆ ನಮ್ಮಂತ ದೊಡ್ಡಮಂದಿ ಆಶೆ ತಿರಿಸೋದಕ್ಕ ತೆಪ್ಪು.... ತೆಪ್ಪು ಅಪ್ಪಿ ತಪ್ಪಿನೂ ಈ ಮಾತು ಆಡಬ್ಯಾಡ. (ಹತ್ರಕರದ, ಕಿವಿಯೊಳಗ) ನಿನಮಾತನ್ನೇನಾರು ಮಾರಕೇಳಿಸಿಕೊಂಡನಂದ್ರ ಹಾಡಹಗಲೆ ಆಕ್ರಮಣ ಮಾಡ್ತಾನ.

ಮಾರ :- ಬುದ್ಧಿ ಒಸಿ ಹಟ್ಟಿತಾವ ಹೋಗಿ ಬರ್ತಿದ್ರಾ. ಗುಸು ಪುಸು ಸುದ್ಧಿ ಎಲ್ಲಿಗಂಟ ತಲಪ್ತೋ ದಿಟ ಮಾಡ್ಕಂಡ ಬರ್ತಿನಿ.

ರಂಗೇಗೌಡ :- ಆಹಾ, ಈ ಮಗನ ದಿಮಾಕನೋಡ್ರಪ್ಪ. ಈ ಮಕ್ಕಳನ್ನ ಹಿಂಗ ಬಿಟ್ರೆ ನಮ್ಮ ಮಾನಮರ್ಯಾದಿ ಕಾಸಿಗ ಕಿಮ್ಮತ್ತಿಲ್ದಂಗೆ ಮಾಡಿಬಿಡ್ತಾರಪ್ಪೊ.

ಗುಂಡೇಗೌಡ :- ಹಂಗಾಕ ಬಿಟ್ರತಾನೆ. ನಾವೆಷ್ಟೊ ಹೊರಗ ವೈರಿಗಳಾದ್ರು ಈ ಟೇಮನಾಗ ಒಂದೇ ಕುಲಸ್ತರು.

ಸಣ್ಣಗೌಡ :- ಅದೆಲ್ಲಿ ಏನಾಗಬೇಕೊ ಅದನ್ನ ಪದ್ಧತಿ ಸೇರೆ ಮಾಡಿಮುಗ್ಸಿ ಬಿಡಬೇಕು. ನನ್ನ ತಲಿಯಾಗ ಒಂದ ಉಪಾಯ ಓಡಾಕ ಹತ್ಯತಿ. ಸೊಳ್ಳೆಗೌಡನ್ನ ರಂಗಗೇಗೌಡನ ತ್ವಾಟದ ಮನಿಗ ಬರಾಕ ಹೇಳ್ರಿ.

* * *

C-10

ಸನ್ನಿವೇಶ–೩

ಆಕೃತಿ :- ಈ ಮಂದಿ ಸುಮ್ನಿದ್ರು ಸಾವು ಕಳಚಿಕೊಂಡು ಬೀಳತೈತಿ, ಏನಾರೂ ಮಾಡಾಕ ಹ್ವಾದ್ರು, ತಲಿದಂಡ ಕೊಡಬೇಕ ಆಗತೈತಿ. ಹಂಗಾರ ನೀವ ಹೇಳ್ರಿ, ಪ್ರೀತಿಗ ಸಣ್ಣವ, ದೊಡ್ಡಾವ ಅಂಬೋದೇನಾರು ಐತ. ಉಚ್ಛಾ, ನೀಚ, ಮೇಲು, ಕೀಳು ಊಹೂಂ. ಏನೊಂದು ಇಲ್ಲಾ. ಅದು ಯಾವಾಗ ಹ್ಯಾಂಗ, ಎಲ್ಲಿ? ಯಾವತ್ತು ಸಿಗಾಕಿಲ್ಲ. ನಮ್ಮ ಕೈಗ ನಮ್ಮ ಮನಸ್ಸಿಗ ಎಟಕದ ವಿಷ್ಯ..

ಕಣ್ಣ ಕಣ್ಣೊಳಗಿನ ಪ್ರೀತಿ
ಎದಿಮುಟ್ಟಿ ಮನಸತಟ್ಟಿ
ಮತಿಕೆಡಸಿದ ಪರಿನ್ಯಾರು ಬಲ್ಲರೋ ಅಣ್ಣ
ಮಾತಿಲ್ಲದ ಮೌನ ಕಲ್ಲದೇವರನ್ನು ಬಡಿದು
ಕಳವಳದ ಹಳವಂಡ ಅರ್ಥವಾಗದು

ಜಾಣ ಇಂದಿನ ಪರಿನಿನಗ ನಾಳೆ ತಿಳಿಯದು.

ಯಾರಲ್ಲಿ, ಯಾಕಸುಮ್ಮನೆ ಚರ್ಚೆಮಾಡ್ತಿದಿರಿ. ಇದೇನು ನಾಟಕದ ಮನೆನೋ ಇಲ್ಲಾ ಪಾರ್ಲಿಮೆಂಟು? ನಿಮ್ಮ ಚರ್ಚೆಗಳು, ವಾದ ವಿವಾದಗಳು ಏನೇ ಇದ್ರೂ ಈ ಜಗದ ಸೋಜಿಗ ಅರ್ಥ ಆಗಾಣಿಲ್ಲಾ, ಯಾಕಂದ್ರ ನೀವು ಕಂಡದ ಒಂದು, ಅಲ್ಲಿ ನಡಿಯೋದು ಮತ್ತೊಂದು (ಹಲಿಗೆ ಬಾರಿಸುತ್ತ ನಿರ್ಗವಿಸುವನು).

ಸೊಳ್ಳೆಗೌಡ :- ಹಿಂಗಾದೀತಂತ ನಾ ಕನಸ ಮನಸನ್ಯಾಗೂ ಊಹಿಸಿರಲಿಲ್ಲ. ನಾಯಿ ಅಗಸಿಬಾಗಲ ದಾಟಿದ್ರ ಸಹಿಸಿಕೊಳ್ಳದ ನಾವು, ಅದು ಅಡಗಿಮನಿಗ ಹೋಗಿ ಮಾಡಿದ ಅಡಗೆ ತಿಂದ ತೇಗತು ಅಂದ್ರ....

ರಂಗೇಗೌಡ :- ನಾ ಅವತ್ತ ಬಡ್ಕೊಂಡೆ, ಎಕ್ಕಡಾನ ಮನಿಹೊರಗ ಇಡಬೇಕು, ತಲಿಮ್ಯಾಲಲ್ಲಾ ಅಂತಂದು. ಈ ಮಗ ಸೊಳ್ಳೆಗೌಡ ನನ ಮಾತ ಎಲ್ಲ ಕೇಳ್ತಾನ.

ಸೊಳ್ಳೇಗೌಡ :- ಲೇ ರಂಗ, ಬಾಯಿಬಿಗಿ ಹಿಡದ ಮಾತಾಡು.

ಸಣ್ಣಗೌಡ :- ಲೇ ನೀವಿಬ್ಬರು ಹಿಂಗ ಕಚ್ಚಾಡೋದು ಆ ಮಂದಿಗ ತಿಳದ ಹಿಂಗಾಡ್ತಿರೋದು. ನೋಡ್ರಲೇ ಈ ಜಗತ್ತಿನಾಗ ಒಂದ ನೇಮ ಐತೆ. ಅದೇನಪ್ಪ ಅಂತಂದ್ರ ದೇಶ ಆಳಾಕ ಒಬ್ನೆ ರಾಜ ಬೇಕು. ಊರಾಳಾಕ ಒಬ್ಬನೆ ಗೌಡ. ಆದ್ರ ಇಲ್ಲ ಏನಾಣ್ಯತಪ್ಪ ಅಂತಂದ್ರ ನಾವೆಲ್ಲ ಗೌಡಕಿ ಮಾಡಾಕ ಹೊಂಟಿವಿ. ಊರಂದ ಮ್ಯಾಲ ಉಸಾಬರಿ ಇದ್ದದ್ದೆ. ಯಾವಕಾರಣಕ್ಕೂ ನಾವು ಒಂದಂತ ಆ ಹಟ್ಟಿ ಮಂದಿಗ ಗೊತ್ತಾಗ ಬಾರದು.

ಗುಂಡೆಗೌಡ :- ಅದೇನೊ ಉಪಾಯ ಅಂತ ಹೇಳಲೇ ಇಲ್ಲಾ.

ಸಣ್ಣೇಗೌಡ :- ಒಸಿ ನಿಧಾನ. ಇಲ್ಲಿ ಗ್ವಾಡಿಗೂ ಕಿವಿ ಅದಾವ. ಆಲೋಚನೆ ನನ್ನ ತಲಿಯೊಳಗ ಭದ್ರವಾಗ್ಯೆತೆ. ನಾಳೆ ಪಂಚಾತಿಕಟ್ಟಿಗ ಮಂದಿ ಸೇರ್ತಾರ.

* * *

ಸನ್ನಿವೇಶ–೪

ಸಾದಲಿಂಗೆಗೌಡ :– ಪೂಜಾರಪ್ಪನವರ ಮೈಮ್ಯಾಲ ನಿನ್ನೆರಾತ್ರಿ ಊರಚೌಡಿ ಪವಡಿಸಿ ಆಡಿದ ಮಾತಗಳನ್ನು ಹೇಳ್ಯಾರ.

ತಳವಾರಕೆಂಚೀರ :– ಅದೇನ ವಿಷಯ ಧಣಿ, ವಸಿ ಬಿಡಿಸಿ ಹೇಳಿ ನಮ್ಮವ್ವ ನಂತಾಯಿ ಏನ ಹೇಳ್ಯಳಂತ.

ಅಂದಾನಿಗೌಡ :– ತಳವಾರ ಹೇಳೋದು ಬರಾಬರಿ ಐತೆ ಹ್ಯಾಂಗೂ ಊರ ಪೂಜಾರಪ್ಪ ಯಂಗಟರಮಣ ಭಟ್ರು ಅವ್ರೆ ಅವರ ಬಾಯಿಂದ್ಲೆ ಹೇಳ್ಸಿ ಸತ್ಯವ.

ಚಾಮ :– ಆ ದ್ಯಾವಿ ಹಿಂಗ ಯಾವಾಗ ಬೇಕ ಅವಾಗ ಪವಡಿಸಕಿಲ್ಲ ಊರಾಗ ಏನೋ ಆಗಬಾರದ ಆಗ್ಯೆತೆ ಅದಕ್ಕೆ ಸಿಟ್ಟಾಗವಳೆ... (ಬಾಡೂಟದ ರುಚಿನೋಡಿ ಬಾಳದಿನ ಆಗಿದ್ದ ನೆನಪಮಾಡ್ತ) ಮಂದಿ ದೇವ್ರನನ್ನ ಮರ್ತಾರೂ ಇಲ್ಲಾ ದೇವರು ಮಂದೀನ. ಅಂತು ಎಲ್ಲೋ ಎಡವಟ್ಟು ಆಗಿರೋದು ದಿಟವೆ.

ಸಾದಲಿಂಗೇಗೌಡ :– ಲೇ ಚಾಮು, ನಡಕ ಬಾಯಿ ಹಾಕಬಾರದಂತ ಗೊತ್ತಿಲ್ಲೇನಲೆ. ನಾಕ ಕತ್ತಿವಯಸ್ಸಾದ್ರು, ಮಗನೆ ನಿಂಚಾಳಿ ಬಿಡ್ಲಿಲ್ಲಾ ನೋಡು.

ಚಾಮ :– ಬುದ್ಧಿ ಅದು..... ನಾಲಗಿ...

ಅಂದಾನಿಗೌಡ :– (ಸನ್ನೆ ಮಾಡಿ) ಹೂಂ... ಹೂಂ....

ಇದು ಯಾರಬೇಕಾರು ಮಾತಾಡೋ ವಿಷಯವಲ್ಲ

C-6

ಯಂಕಟರಮಣ :- ಊರಿಗ ಗಂಡಾಂತರ ಬರೋದು ನಿಶ್ಚಿತ.

ಸಾದಲಿಂಗೇಗೌಡ :- ಪ್ರಜಾರಪ್ಪನವರೆ ವೇದ, ಪಾಂಡಿತ್ಯ ಪಡದೋರು ನೀವು, ನಿಮ್ಮ ಪಾಂಡಿತ್ಯದಿಂದ ಆ ದೇವಿನ ಒಲಿಸಿಕೊಂಡು ಆಕಿಕೂಡ ಮಾತಾಡ್ತಿರೋದು ಯಾರಿಗ ತಿಳಿದಿಲ್ಲಾ ಹೇಳಿ. ಹಿಂಗ ಒಗಡಿನಂಗ ಹೇಳಿದ್ರ ಹ್ಯಾಂಗ

ಮಂದಿ :- (ಗುಸು. ಗುಸು.).. ಹೇಳಿ ಬುದ್ಧಿ ಅದೇ ನಂತವ.

ಒಬ್ಬ :- ನಮ್ಮನ್ನೆಲ್ಲಾ ಪಾರಮಾಡೋರು ನೀವ.

ಇನೊಬ್ಬ :- ಅಲ್ಲಾ ಬರೊದೆವ್ವ, ಭೂತಗಳನ್ನ, ಗಾಳಿ-ಧೂಳಿಯನ್ನ ಅಂಗೈಯೊಳಗ ಹಿಡದಿಡೊ ನೀವ ಹಿಂಗಂದ್ರ.

ತಳವಾರ ಕೆಂಚೀರ :- ಎಂಥಾ ಪಾಡಿತ್ತು ನಮ್ಮೂರು. ಯಾಕಿಂಗಾತು?

ಚಾಮ :- ದೇವಿಗ ಬಲಿಕೊಡದ್ದಕ್ಕಹಿಂಗಾತು.

ಅಂಧನಿಗೌಡ :- ಲೇ ತಳವಾರ, ಚಾಮ ಮಾಡಾಕ ಹ್ವಾರೆ ಇಲ್ಲೇನ ನಿಮಗ. ವಿಷಯ ನಿವಂದ್ಕೊಂಡದ್ದಲ್ಲ. ಅಟು ಬಾಯಿ ಮುಚ್ಕೊಂಡ ದೊಡ್ಡೋರ ಮಾತ ಕೇಳ್ರಿ!

ಯಂಕಟರಮಣ :- ಊರಾಗ ಹುಲಸು ಕಮ್ಮಿ ಆಗ್ಯೆತೆ ಅದಕಂತ್ಲೆ, ಮಳಿಬೆಳಿ ಆಗವಲ್ದು. ಪಕ್ಕದ ಕೆಂದೂರಿಗ ಆಗೊ ಮಳಿ ನಮಗಾಗಂಗಿಲ್ಲ ಯಾಕೆ?

ಚಾಮ :- ಇನ್ಯಾಕೆ, ದೇವಿಗ ಕ್ವಾಣ ಬಲಿಕೊಡದ್ದಕ್ಕೆ (ಹೇಳೋದು ಹೇಳಿ ನಾಲಿಗಿ ಕಚ್ಕೊಂಡು) ಅದು.... ಬುದ್ಯೋರ....

ಯಂಕಟರಮಣಭಟ್ಟ :- ಒಂದ ಮ್ಯಾರಿಗಾಗೊ ಮಳಿ ಮತ್ತೊಂದ ಮ್ಯಾರಿಗ ಆಗಂಗಿಲ್ಲ ಒಂದೆತ್ತಿನ ಒಂದಕೋಡು ತೊಯ್ದ್ರ ಮತ್ತೊಂದು ತೊಯ್ಯಂಗಿಲ್ಲ....

ಚಾಮ :- ಯಾಕೆ?

ಅಂದಾನಿಗೌಡ :- ಚಾಮ

ಚಾಮ :- ಬುದ್ಧಿ.

ಯಂಕಟರಮಣಭಟ್ಟ :- ಈ ಚಾಮನ ಸಭೆಯಿಂದ ಹೊರಗೆ ಓಡಿಸಿ.

ಸಾದಲಿಂಗೇಗೌಡ :- ಹೂಂ... ಹೋಗಲಾ....

ಚಾಮ :- ಅದು....

ಯಂಕಟರಮಣಭಟ್ಟ :- ಚೌಡಿ ಸಿಟ್ಟಿಗ ಬಂದಾಳ.... ಹುಲಸ ತರಬೇಕು.

ಅಂದಾನಿಗೌಡ :- ಪೂಜಾರಪ್ಪನವರೆ ಏನ ನಿಮ್ಮ ಮಾತಿನ ಅರ್ಥ.

ಯಂಕಟರಮಣ :- ಗೌಡ್ರ ನಿಮಗ ಅರ್ಥ ಆಗಾಂಗಿಲ್ಲ......

ಗುಂಪು :- ಏನ್ರಪ್ಪ, ಹುಲಸನ್ನ ತರಬೇಕು ಅಂತವ್ರೆ

ಅಂದಾನಿಗೌಡ :- ಹೌದು, ಪೂಜರಾಪ್ಪನೋರು ಹೇಳ್ತಾರಂದ್ರ ಮೇಲೆ ಹುಲಸು ತರಾಕ ಬೇಕು.

ಚಾಮ :- (ಮಂದಿನಡಕ ಇಣುಕಿ) ಈಗ ಯಾ ಗಂಡ ಮಗ ಅವ್ನೆ ಬುದ್ಧಿ. ಹಿಂದ ಸರ್ಪನ ಅಪ್ಪ ಬುಕಾಟಿಯಿದ್ದ.

ಸಾದಲಿಂಗೇಗೌಡ :- ಯಾರರು ಎಳ್ಕಂಡ ಹೋಗ್ರಿ ಅವನ್ನ. ಬುಕಾಟಿ ಕಡದು ಕಿಸದದ್ದು ಮಂದಿಗೆಲ್ಲಾ ಗೊತ್ತೆ ಐತೆ. ಹುಲಸು...

ಅಂದಾನಿಗೌಡ :- ಸಾದಲಿಂಗ, ನಮ್ಮ ಪಕ್ಕ ಪರಂಗಿಹಳ್ಳಿಯೊಳಗ ಚೌಡವ್ವನ ಜಾತ್ರಿಗ ಎಲ್ಲಾ ಸಜ್ಜ ಆಗ್ಯೆತಿ.

ಯಂಕಟರಮಣ :- ಮುಂದಿನದನ್ನೇನು ಹೇಳಬೇಕಾಗಿಲ್ಲ.

* * *

ಸನ್ನಿವೇಶ–೫

ಸೊಳ್ಳೆಗೌಡ :- ನಮ್ಮೂರ ಕೆಳಜಾತಿಯವರನ್ನ ಕೊಲ್ಲಾಕಂತ್ಲೆ ನಿಮ್ಮೂರಾಗ ಚರಗ ಆಡ್ಸೋದು.

ವರದೆಗೌಡ :- ಹೌದು ಸೊಳ್ಳೆಗೌಡ ಈಗ ಯಾರು?

ರಂಗೇಗೌಡ :- ಅದೆಲ್ಲಾ ನಿನಗ ಬ್ಯಾಡ ವರದ. ಚೌಡವ್ವನ ಜಾತ್ರಿ ದಿನ ನಿನಗ ಗೊತಾಗತೈತಿ.

ವರದೆಗೌಡ :- ಹೌದ್ರಪ್ಪ. ಈ ಕೆಳಜಾತಿಯ ಹಾಳಾದ ಸುಳಿಮಕ್ಕಳು ಹೆಂಡ ಸರಾಯಿ ಕುಡಿಯದೆ ಏನಕೆಲ್ಸಾನು ಮಾಡಲ್ಲ ಅಂತಾರ. ಕುಡಿಲಿಲ್ಲಾಂದ್ರೆ ಅವರಿಗೆ ಮಮಕಾರ ಜಾಸ್ತಿ ಅಂತೆ ಕುಡದ ಮತ್ತನೊಳಗ ಅವರ ಮನಿ ಮುಂದಿನ ಬೇಕಾರ ಕೊಲ್ಲಾಕ ರಡಿಯಾಗ್ತಾರ.

ಸೊಳ್ಳೆಗೌಡ :- ಅದೇಟಾರ ಆಗಲಿ, ನೀ ಯೋಚನೆ ಮಾಡ ಬ್ಯಾಡ ಈಗ, ಐವತ್ತ ಸಾವರ, ಉಳಿದಿದ್ದನ್ನು ಕೆಲ್ಸದ ನಂತರ ಕೊಡ್ತಿನಿ.

ವರದೆಗೌಡ :- ನೋಡಪ್ಪ, ಕೆಲ್ಸಮಾಡಿಸಿಕೊಂಡು ಕೈ ಎತ್ತಿ ಬಿಟ್ಟಿಯಾ ಮತ್ತ.

ಸೊಳ್ಳೆಗೌಡ :- ಗಡಿದಾಟಬಾರದು ಗುರಿ ಮುಟ್ಟಬಾರದು ಅಂವ ಬೋ ಬೆರಕಿನನಮಗ.

ವರದೆಗೌಡ :- ಅಲ್ಲಸೊಳ್ಳೆಗೌಡ ನೀ ಈಟ ಹೇಳಿ ಅಲ್ಲಾ ಅವನ ಸುತ್ತ ನಾಕಮಂದಿನ ಇಟ್ಟುಬಿಡ್ತಿನಿ. ಅದೇಗೆ ಪಾರಾಗ್ತಾನ ನಾನು ನೋಡ್ತಿನಿ.

ರಂಗೇಗೌಡ :- ಯಾರಿಗೂ ಅನುಮಾನ ಬರಬಾರದಪ್ಪೊ ಇದ್ರಾಗ.

ವರದೇಗೌಡ :- ಹಿಂಗ್ಯಾಕ ನೂರಾಎಂಟ ಕಣಿ ಮಾಡ್ತಿ ಹೋಗ ಸುಮ್ನೆ.

* * *

C – 21

ಸನ್ನಿವೇಶ–೬

ಸಂಕವ್ವ :– ಯಾಕ್ಲೆ ಸರ್ಪ, ಒಂದ ನಮೂನಿ ಅದಿಯಲ್ಲಿ ಮತ್ತೆ ಯಾರನಾರು ಹೋಡದದ ಬಂಥೆ ಏನ್ಲಾ. ಆ ಸೊಳ್ಳೆಗೌಡನ ಹಿಂದ ಸೇರಿದಮ್ಯಾಲ ನೀ ಯಾಕೊ ಮಾರಿಸಪ್ಪಗ ಮಾಡ್ಕಂಡ ಇರ್ತಿ ಕಣಲೋ.

ಸರ್ಪ :– ಅವ್ವ, ಅಂತಹದ್ದೇನು ಇಲ್ಲ.
ಏನಮಾಡೋದ ಹೇಳು ಉಳ್ಳವರು ಹೇಳಿದ್ದನ್ನು ಮಾಡಾಕ ಬೇಕು. ಅವರು ನಮ್ಮಿಂದ ನಮ್ಮ ಮಂದಿನ ಹೊಡಸ್ತಾರ.

ಸಂಕವ್ವ :– ಈ ಜಗತ್ತೆ ಹಂಗಮಗ. ಕೈಲಾಗದ ಮಂದಿಮ್ಯಾಲ ಜನ ಮುಗಿಬೀಳೋದು. ಅಂದಂಗ ಮಗ ನಿನ್ನ ಹೆಂಡ್ರು ಗಂಡ ಕೂಸ ಹಡದವಳಂತೆ ಈಗ ನಿನ್ನ ಹೆಂಡ್ರು ಹನಮಿ ಕಡಿಂದ ಸುದ್ದಿ ತಂದಿದ್ರು.

ಸರ್ಪ :– ಅವ್ವ ನಿಜ ಏನಬೆ.
(ಸ್ವಗತ) ಮಗ ಹುಟ್ಟಿದ ಸಂತೋಷನು ವ್ಯಕ್ತಪಡಿಸದಂಗಾತು. ದೊಡ್ಡ ಜಾತಿಯವರ ಸೇಡಿಗೂ ಬಲಿ ನಾವೆ ಪ್ರೀತಿಗೂ ತಲಿತಗಿಯೋದು ನಮ್ಮದ.

ಸಂಕವ್ವ :– ಯಾಕ್ಲೆ ಮಗ. ಮಗ ಹುಟ್ಟಿದ್ರುವೆ ಮಕ ಕಪ್ಪಿಟ್ಟೈತೆ

ಸರ್ಪ :– ಛೇ ಛೇ ಹಂಗೇನಿಲ್ಲವ್ವ....
ಯವ್ವಾ, ನಂದೊಂದ ಮಾತನ್ನ ನಡಿಸಿಕೊಟ್ಟಿಯಾ.

ಸಂಕವ್ವ :– ಯಾಕೋ, ಏನೇನೊ ಮಾತಾಡ್ತಿದ್ದಿಯಾ. ಒಳ್ಳೆ ಕರಿಕಲ್ಲಂತ ಎದಿ,

C-4

ಹತ್ತಾಳ ಬಂದ್ರುವೆ ನೀರ ಕುಡಿಸೊ ಗಂಡಸ ನೀನು. ನೀ ಯಾಕೆ ಹಿಂಗಂತಿಯಾ.

ಸರ್ಪ :- ಯವ್ವಾ, ಎದರಬಂದ್ರ ಹತ್ಯಾಕ, ಇಪ್ಪತ ಮಂದೀನು ಸಿಗದ ಹಾಕಬಲ್ಲೆ. ಆದ್ರಾ ದೌಳೇರ ಸಂಚಿಗ ಬಲಿಯಾದರ ಕಷ್ಟಕಣಬೆ.

ಸಂಕವ್ವ :- ಎಯ್ ಮಗ, ಯಾಕಿಂಗ ಹುಚ್ಚರಂಗ ಮಾತಾಡ್ತಿದ್ದಿಯಾ ಹೇಳು. ಏನ್ ನಡಿತು ಅಂತ. ಹೇಳಲಾ, ಅಯ್ಯೊ ದೇವರೆ, ಬಡವನ ಕೋಪ ದವಡೆಗೆ ಮೂಲ ಅಂತ ಬಡಕೊಂಡ್ರು, ಕೇಳಲಿಲ್ಲಾ. ಹಾಳಮಂದಿ ಬೆನ್ನ ಹಿಂದ ಚಾಕು ಹಾಕ್ತಾರ ಮಗ ಅಂದೆ. ನನ್ನ ಮಾತ ಕೇಳಲೇ ಇಲ್ಲಾ. ನಮ್ಮ ಮಂದಿಯಿಂದಲೇ ನಮ್ಮ ತಲಿತಗಿಯೋ ಚಾಣಕ್ಷಮಂದಿ. ಮುಗೀತಿನ್ನ ನಿನ್ನ ಕತಿ.

ಸರ್ಪ :- ಅಂಥಹದ್ದೇನು ಆಗಿಲ್ಲ ಯಾಕಿಂಗ ಬಡ್ಕಂಡಿಯಾ.

ದ್ಯಾಮವ್ವ :- ಇನ್ನೇನ ಆಗಬೇಕೊ. ಬೆಕ್ಕೂ ಕಣ್ಣು ಮುಚ್ಕೊಂಡ ಹಾಲ ಕುಡದ್ರೆ ಜಗತ್ತು ನೋಡಂಗಿಲ್ವೆ?

ಸರ್ಪ :- ಬೇ ನಿನ್ನವ್ವನ ದ್ಯಾಮವ್ವ, ಹೆಚ್ಚು ಕಡಿಮಿ ಮಾತಾಡಿ ನಮ್ಮವ್ವನ ಹೆದರಿಸಿದ್ಯೋ ಗುಡಿಯಾಗ ಹೋಗಿ ಕುಂದ್ರಿಸಿ ಬರ್ತಿನಿನೋಡಮತ್ತ.

ದ್ಯಾಮವ್ವ :- ಮದ್ಲು ಗುಡಿಗುಂಡಾರ ನೀ ನೋಡ್ಕ. ಸೊಳ್ಳಿಗೌಡ ತನ್ನ ಮಂದಿನ ನಿನ್ನ ಹಿಂದ ಬಿಟ್ಟಾನ.

ಸರ್ಪ :- ಇಷ್ಟು ಬೇಗ ಸುದ್ದಿ ಊರತುಂಬ ಹರಡಿಬಿಡ್ತೆ? ಅಯ್ಯೊದೇವರೆ

ಸಂಕವ್ವ :- ಅವನ್ಯಾಕ ಮಂದಿ ಬಿಡ್ತಾನ. ಅಂತ ತಪ್ಪು ನನಮಗ ಏನುಮಾಡಿಲ್ಲ.

ಸರ್ಪ :- ಯವ್ವ, ನನಗೇನಾರು ಹೆಚ್ಚು ಕಮ್ಮಿ ಯಾದ್ರ ನನಮಗನ್ನ ಸರಿಯಾಗಿ ನೋಡ್ಕ. ಈ ದುಷ್ಟ ಸೂಳಿಮಕ್ಕಳ ನೆರಳ ಬೀಳಬಾರದು ಅವನ ಮ್ಯಾಲ. ನಾ ಏನಾದೆ ಅಂತ ತಿಳಿಬಾರದು.

ಸಂಕವ್ವ :- ಲೇ ಸರ್ಪ. ಯಾಕ ಹಿಂಗ ಮಾತಾಡ್ತಿ ಮಗ, ನೀನು ಹುಲಿ ಕಣಲೇ ನಿನ್ನ ಅದ್ಯಾವನ ಮುಟ್ತಾನ? ಏನ ನಡಿತು ಅಂತ ಹೇಳ ಆಟು...

ದ್ಯಾಮವ್ವ :- ಅವನೇನ ಕೇಳ್ತಿ ನಾ ಹೇಳ್ತಿ ಕೇಳು. ಸೊಳ್ಳಿಗೌಡನ ಹೆಂಡ್ರು.....

* * *

ದೃಶ್ಯ–೩
ಸನ್ನಿವೇಶ–೧

ಸೊಳ್ಳೆಗೌಡ :– ಮಂದಿನಾಲಗಿ ದಿಕ್ಕುದಸೆ ಇಲ್ಲದ ಹರದಾಡಾಕ ಹತ್ಯವ (ಅವಳ ಜಡೆ ಹಿಡಿದು) ಬೊಳಗಲೇ.... ಅಂವನ್ನಾ... ನೀ ಇಟ್ಕೊಂಡಿಯಂತೆ?

ಶರ್ಮಿಳೆ :– ಹೇಳ್ರಿ.... ಅಂವ....

ಸೊಳ್ಳೆಗೌಡ :– ಅನಾದಿಕಾಲದಿಂದ ನಡಿತಿರೊ ಸತ್ಯ ಇದು.
ಊರ ಆಳೋ ಗೌಡ ನಾನು.

ಶರ್ಮಿಳೆ :– ಅಂದ್ರ ಕಂಡೋರ ಮನಿ ಅಗಳಿ ಸರಸಿ ಒಳಗ ನುಗ್ಗಬಹುದು.

ಸೊಳ್ಳೆಗೌಡ :– ಹದ್ದ ಮೀರ್ತಿದ್ದಿಯಾ

ಶರ್ಮಿಳೆ :– ನಿಮ್ಮ ಪೌರುಷದ ಬಗ್ಗೆ ಮಾತಾಡ್ತಿದ್ದಿನಿ

ಸೊಳ್ಳೆಗೌಡ :– ಆ ಹಕ್ಕು ನಿನಗಿಲ್ಲ. ನಿನೊಬ್ಬ ಅಸಹಾಯಕ ಹೆಂಗಸು. ನಾಕು ಗೊಡೆಯ ನಡುವೆ ಬದಕಬೇಕು, ಅವು ಹೇಳುವ ಕತೆಗಳನ್ನ ಕೇಳ್ಕಂಡ.

ಶರ್ಮಿಳೆ :– ನೀವು ಮಾತ್ರ ಎಷ್ಟ ಬೇಕಾರು ಗೊಡೆಗಳನ್ನು ಹಾರಿ ಮನಸಿಲ್ಲದ ಮನಸ್ಸಿನ ಜೊತೆಗೆ ಚಕ್ಕಂದ ಆಡಬಹುದು.

ಸೊಳ್ಳೆಗೌಡ :– ಲೇ ಬೇವರ್ಸಿ ಮುಂಡೆ, ಅದೇ ಕಣೆ ನಮ್ಮ ಪ್ರತೀಷ್ಠೆ. ಇದು ನೆನ್ನೆ ಇವತ್ತಿಂದಲ್ಲಾ. ಅನಾದಿಕಾಲದಿಂದಲೂ ನಡ್ಕೊಂಡ ಬರ್ತಿರೋದು. ಅಪ್ಪ, ಅಜ್ಜ, ಮುತ್ತಜ್ಜ, ಅವರಜ್ಜ..... ಇದೊಂದು ಪರಂಪರೆ

ಶರ್ಮಿಳೆ :– ಓ.... ಎಂಥ ಘನಕಾರ್ಯಕ್ಕೊಂದು ಪರಂಪರೆಯಿದೆ ನೋಡಿ.

'ಹೌದು ನೀವು ಅತ್ಯಾಚಾರ ಮಾಡಿರುವ ಹೆಣ್ಣುಗಳನೊಮ್ಮೆ ಕೇಳಿದ್ದಿರಾ.

ಸೊಳ್ಳೆಗೌಡ :- ಏನಂತ.

ಶರ್ಮಿಳೆ :- ಅವಳಿಗೆ ನಿಮ್ಮ ಸಂಬಂದ ಇಷ್ಟಾನ ಅಂತ

ಸೊಳ್ಳೆಗೌಡ :- ಏಯ್, ತಿಕ್ಕಲ್ ಹೆಣ್ಣೆ.... ಅದು ಆಕ್ರಮಣ ಕಣೆ ಶಕ್ತಿ ಪ್ರದರ್ಶನ. ಪೌರುಷ ಇರೋನ ಮಾಡುವ ಕೆಲ್ಸ

ಶರ್ಮಿಳೆ :- ಆದ್ರ ಮನಿಯೊಳಗ ಚಂದನದ ಗೊಂಬೆಯಂತ ನನ್ನ ಪಾಡು?

ಸೊಳ್ಳೆಗೌಡ :- ನೀನೇನ್ ಇದ್ರು ಅದು ಮನೆಗೆ ಭೂಷಣಕ್ಕೆ ತಂದಿರುವ ನಡದಾಡೊ ಗೊಂಬೆ. ನಿನ್ನ ಹಣೆಬರ ಅಷ್ಟೆ.

ಶರ್ಮಿಳೆ :- ಅದಕ್ಕೆ.... ನಾನು ಆಕ್ರಮಣ ಮಾಡ್ದೆ

ಸೊಳ್ಳೆಗೌಡ :- ನಿನಗ ಆ ಅಧಿಕಾರ ಇಲ್ಲ. ಮನಿಬಿಟ್ಟು ಹೋಗಂಗಿಲ್ಲ. ಆದ್ರ..... (ದೊಡ್ಡದು)

ಶರ್ಮಿಳೆ :- ನೀನು? ಮನಿಯಾಕಿನ ಬಿಡಬಹುದು ಅನ್ನೋದಾದ್ರ ನಾ ಯಾಕ ಮನಿಬಿಡಬಾರದು?

ಸೊಳ್ಳೆಗೌಡ :- ಎಯ್, ನಿಮ್ಮವ್ವನ ನಾಯಿ ಜಾತಿಯವಳ. ಇವತ್ತಿನ ಮಟ ಯಾವನು ನನ್ನೆದುರು ನಿಂತ್ಕಂಡ ಮಾರಿಕೊಟ್ಟ ಮಾತಾಡಿದ್ದಿಲ್ಲ. ಯಕಚಿತ್ ಹೆಣ್ಣ ಹೆಂಗಸು ನನ್ನೆದ್ರುವಾದಸ್ತಿಯಾ?
(ಕೂದಲ ಹಿಡಿದು ಥಳೆದಾಡುವನು)

ಶರ್ಮಿಳೆ :- ಅಯ್ಯೊ, ಸತ್ತೆ.... ಹೊಡಿರಿ...
ಕೊಂದಾಕ್ರಿ ನನ್ನ. ಹಿಂಗ ಸುಕಾಸುಮ್ನೆ ಕನಸಕಾಣ್ತ ಕೋಳಿಯೋ ಬದಕಿಗಿಂತ ಸಾವೆವಾಸಿ.
ಥು...... ನೀವು ಗಂಡಸ್ಸೆ? ಕೈಲಾಗದ ಹೆಣ್ಣಿನ ಮೇಲೆ ಕೈ ಮಾಡೋರು. ಹೆಣ್ಣನ್ನ ಹೇಗ ನೋಡ್ಕಬೇಕು ಅಂತ ತಿಳಿಯದ ನಿಮ್ಮಂತ ನರಭಕ್ಷಕನಿಗೆ ಮದ್ವಿ ಮಾಡಿಕೊಟ್ನಲ್ಲಾ ನಮಪ್ಪ ಅವನಿಗ ಎಕ್ಕಡದಿಲೆ ಹೊಡಿಬೇಕು.

ಸೊಳ್ಳೆಗೌಡ :- ಲೇ, ಬಾಯಿ ಬಿಗಿಹಿಡದ ಮಾತಾಡೆ. ನಿನ್ನ ಕೊಂದ ಹಾಕಿದ್ರು ನಿನಗ ಬಿಡಸೋರಿಲ್ಲಾ. ಹೇಳು ಯಾರಬರ್ತಾರ?

ಬರ್ತಾನ ನನ್ನ ಗೆಣಕ್ಯಾರ, ಕೀಳ ಜಾತಿಯ ನಾಯಿ ಸೂಳಿ ಮಗ.

ಹೋಗಿ ಹೋಗಿ ನಮ್ಮ ಮನಿ ಬಾಗಲಕಾಯೋ ನಾಯಿ ಕೂಡ ಸಂಗ ಮಾಡಿಯಲ್ಲ.... ನಿನಗ ಏನ ಹೇಳಬೇಕು.

ಶರ್ಮಿಳೆ :- ಆ ನಾಯಿ ನಿಮಗಿಂತ ಸಾವಿರ ಪಾಲು ಒಳ್ಳೆಯದು. ನಾಯಿ ತಿಂದ ಮಾನಕಾಯ್ತದ. ನಿಮ್ಮಂಗ ಕಂಡಕಂಡಲ್ಲಿ ಕಚ್ಚಿ ಬಿಚ್ಚಂಗಿಲ್ಲ.

ಸೊಳ್ಳೆಗೌಡ :- ಇದು ನನ್ನ ಗಂಡಸತನ ಕಣೆ.....

ಶರ್ಮಿಳೆ :- ಮನಿಯೊಳಗ ಇರೋ ಹೆಂಡತಿಯನ್ನು ತೃಪ್ತಿ ಪಡಿಸದೆ ಹೊರಗ ಮರ್ಯಾದಿ ಬಿಟ್ಟು ಅಡ್ಡಾಡೋದು ಪ್ರತಿಷ್ಠೆ ಅನ್ನೋದಾದರ ಅದಕ್ಕ ನನ್ನ ಧಿಕ್ಕಾರ ಐತ್ರೆ.

ಸೊಳ್ಳೆಗೌಡ :- ನೀ ಯಾವಳೆ ಅದನ್ನ ಕೇಳಾಕೂ. ನನ್ನ ಅಡಿಯಾಳಾಗಿರೊ ಹೆಣ್ಣು. ನಿನಗ ಅಸ್ತಿತ್ವನೆ ಇಲ್ಲ. ಊಹೂಂ.....

ಶರ್ಮಿಳೆ :- ಮದಲು ನಿನ್ನ ಅಸ್ತಿತ್ವದ ಬಗ್ಗೆ ಯೋಚನೆ ಮಾಡು.

ಸೊಳ್ಳೆಗೌಡ :- ಅದಕ್ಕೆ ತಾನೆ, ನಿನ್ನದು ಮತ್ತು ನಿನ್ನಗೆಣಕ್ಯಾರನ ಅಸ್ತಿತ್ವವನ್ನು ನಾಮಾವಶೇಷ ಮಾಡ್ತಿರೋದು.

ಶರ್ಮಿಳೆ :- ನೀ ಏನ ಮಾಡೀಯ. ಈಗಾಗಲೇ ಅದು ಇತಿಹಾಸ ಆಗಿ ಹೋಗಿದೆ.

ಸೊಳ್ಳೆಗೌಡ :- ಅದನ ಅಳಿಸಿ ನನ್ನ ಇತಿಹಾಸ ಬರೀತಿನಿ ನೋಡ್ತಾಯಿರು. ಏನಂದ್ಕೊಂಡಿಯ ನನ್ನ.

ಶರ್ಮಿಳೆ :- ಐದ ವರ್ಷಗಳಾದ್ವು ನಿನ್ನ ನೋಡ್ತಿರೋದು. ಸಾವಿರದ್ಯೆನೂರು ರಾತ್ರಿಗಳನ್ನು ಕಳದೀನಿ. ಯಾಕಾರ ಕತ್ತಾಲಾದೀತು ಅಂತ ಬೋಯ್ದುಕೊಂಡು ಮನಸ್ಸನ್ನು ಕೊಂದಕೊಂಡು ಬದಕೀನಿ ಇನೇನೈತಿ ನಿನ್ನ ನೋಡೋದು. ಮಂದಿ ಮಾತಾಡ್ತಾರೆ ಅವಳು ಇವಳಂತ. ಅದೇನ ಕಡದು ಕಿಸದಿಯೋ ಆ ಭಗವಂತಗೆ ಗೊತ್ತು.

* * *

ಸನ್ನಿವೇಶ–೨

ತಿಮರ :- (ಜಡ್‌ನಂಗ್, ಜಡ್‌ನಂಗ್.... ಹಲಿಗೆ ಬಾರಿಸ್ತಾ) ಕೇಳ್ರಪ್ಪೋ ಕೇಳ್ರಿ, ನಮ್ಮ ಹಟ್ಟಿ ಹಿರಿಯ ಮಾರ ಚೌಡಿ ಗುಡಿ ಮುಂದ, ಮಂದಿನ ಸೇರಾಕ ಹೇಳ್ಯಾನ, ಎಲ್ಲಾರು ಬರಬೇಕಂತೆ.

ಹನಮ :- ಯಾಕಂತ್ಲ.....

ತಿಮರ :- ಸಂಜಿಮುಂದ ಬಾ ಎಲ್ಲಾ ತಿಳಿತ್ತೈತೆ.

ಸಂಕ :- ಇನ್ನೇನ ಇರಾಕಸಾಧ್ಯ. ಯಾರಾರ ನಮ್ಮ ಹಟ್ಟಿ ಗಂಡಸ್ಸಿನ ಹೆಡಮುರಗೆ ಕಟ್ಟಾಕ ಗೌಡ್ರಮಂದಿ ಹೇಳಿರಬೇಕು.

ತಿಮರ :- ಸಂಕ, ನಿನ್ನ ಕೆಲ್ಸ ಏಟೈತಿ ಆಟಮಾಡು, ಊರ ಉಸಾಬರಿಗ ಬರಬ್ಯಾಡ. ಅದೇನೊ ನಮ್ಮ ಹಟ್ಟಿ ಪೂಜಾರಿ ಪೀಕಲನ ಮೈಯೊಳಗೆ ಚೌಡವ್ವ ಬಂದಿದ್ಲಂತೆ...

ಹನಮ :- ಹಂಗಾರ ದಿಟವೇ.... ಏನೋ ಕೇಡ ಬಂದೈತೆ. ಅವ್ವ ತಾಯಿ ಬೇಡವ್ವ, ಶಾಪದವ್ವ ನಮ್ಮವ್ವ.

ತಿಮರ :- ಹೊತ್ತಾರೆ ಬಂದ ಬಿಡ್ರಿ, ಮತ್ತೊಮ್ಮೆ ಕರಿಯಾಕ ಆಗಾಕಿಲ್ಲ ನನಿಂದ.

ಸಂಕ :- ನಿನ್ನಹ್ಹಾರೆ ನೀ ಮಾಡಿ, ಬಂದ್ರೇಟು ಬಿಟ್ರೇಟು ನೀ ಹೋಗಲ ತಿಮರ.

C–11

ತಿಮರ :- ಹಂಗಂದ್ರ ಹೆಂಗ್ಲಾ ಸಂಕ. ಹಟ್ಟಿ ಉಳವಿನ ಪ್ರಶ್ನಿ ಐತೆ ಅಂದಾದ ಪೀಕಲ. ಅಂಥ ಫಹನ ಯಿಸ್ಯಾ ಏನೈತೋ.

ಸಂಕ :- ಅದನ್ನ ಆ ರಂಗೇಗೌಡರ ಚೇಲ ಮಾರನೇ ಹೇಳಬೇಕು, ಆಯ್ತು, ಆದದ್ದೆಲ್ಲ ಕಣ್ಮುಂದೆ ಆಗತ್ತೈತಿ ನೋಡಮ ಬಿಡು.

* * *

C—3

ಸನ್ನಿವೇಶ–೩

ಮಾರ :– ಬರೊರೆಲ್ಲಾ ಬಂದ್ರು...

ಸಂಕವ್ವ :– ಕಾಲು ಕೈ ಗಟ್ಟಿಯಿರೊರು ಬಂದಂಗಾತೆಯಪ್ಪ ಆ ನನ್ನವ್ವ, ನಂತಾಯಿ ನಮ್ಮಂತೋರನ್ನ ಬಿಟ್ಟು ಹರೇದ ವಯಸ್ಸಿನವರನ್ನ ಕೇಳ್ತಾಳಲ್ಲಾ ಏನಯಿಸ್ಯಾಂತ.

ಮಾರ :– ಸಂಕವ್ವ ನಮಗೇನ ತಿಳದಾತು. ನಾವು ಕರಿತಲಿ ಮನುಷ್ಯರು ಈಗ ನಮ್ಮಟ್ಟಿ ಪೂಜಾರಿ ಪೀಕಲನ್ನ ಮೈನಾಗೆ ಬರ್ತವಳೆ ಕೇಳ್ಕ ನಮ್ಮವ್ವ.

ಸಂಕವ್ವ :– ಯಾವದ ಸತ್ಯನೋ, ಯಾವದ ಸುಳ್ಳೋ ಒಂದು ಅರ್ಥ ಆಗಂಗಿಲ್ಲ. ಏನ ನೆಂಬಬೇಕು, ಯಾರನ ನೆಂಬಬೇಕು ಗೊತ್ತೆ ಆಗವಲ್ದವ ನನ್ನ ತಾಯಿ ನೀ ಸರಿಯೋ, ಆ ಪೂಜಾರಿ ಸರಿನೋ ಇಲ್ಲ ಸೊಳ್ಳೆಗೌಡನೇ ಸರಿ. ಎಲ್ಲಾ ಬಲ್ಲಾಕಿ ನೀನು ನೀನ ಹೇಳಬೇಕು.

ಮಾರ :– ಹಿಡರಲಾ..... ಪೂಜಾರಿನ....

ಪೀಕಲ :– ಎಯ್... ನನಮಕ್ಕಳ್ರಾ.... ತಿಂದು ಕೊಬ್ಬಹೆಚ್ಚಾಗ್ಯೆತೆನ್ರಲಾ....

ಮಂದಿ :– ಅಯ್ಯೋ, ಇಲ್ಲಾ ತಾಯಿ,,, ಇಲ್ಲವ್ವ....

ಮಾರ :– ಛೇ, ಛೇ, ಇಲ್ಲ ಕಣವ.

ಪೀಕಲ :– ಹೂಂ ಹೂಂ.... ಹಟ್ಟಿಯೊಳಗ ಹೇಳೋರ ಕೇಳೋರು ಯಾರು ಇಲ್ಲ.

ಸಂಕವ್ವ :- ನೀ ಅದಿಯಲ್ಲೇ ನನ್ನವ್ವ ನಿನ್ನ ನಾವು ಕೇಳೋದು. ಹೊತ್ತಹೊಂಡಾಕ ಮುಂಚೆ ಮಾತೆ ಚರಗಿತಗೊಂಡ ಹೋಗೋರು ಚರಗಿಯಿಟ್ಟು ನಮಸ್ಕಾರ ಮಾಡಿ ಹೊಕ್ಕಾರ..... ಅಂತಾದ್ರಾಗ.....

ಪೀಕಲ :- ಊರಿಗ ಬರಸಿಡ್ಲು ಬಡಿತೈತೆ.

ಸಂಕವ್ವ :- (ಸ್ವಗತ) ಅಷ್ಟು ದೌಳೇರ ಮನಿಗಳು ಸುಟ್ಟು ಕರಕಲಾಗಿ ಹೋಗಲಿ...

ಮಾರ :- ಹಂಗ್ಯಾಕಂತಿಯವ್ವ.... ಯಾರೇನ ತೆಪ್ಪಮಾಡ್ಯಾರ ಅವರಿಗ ಶಿಕ್ಷೆಕೊಡು ಊರಿಂದೂರಿಗೆ ಯಾಕ ಕಷ್ಟ ತಂದಿಯೇ

ಪೀಕಲ :- ಊರಾಗ ಹುಲಸು ಇಲ್ಲದಂಗ ಆಗ್ಯೆತೆ.

ಸಂಕವ್ವ :- ನಮ್ಮ ಹಟ್ಟಿಗೇನು ಸಂಬಂಧ ಅಂತೀನಿ. ಹೋಗಿ ಗೌಡ್ರ ಒಣಿಯೊಳಗ 'ಈ ಮಾತ ಹೇಳು. ಹೊತ್ತಾರೆ ಹೋಗಿ ನಡಬಗ್ಗಿಸಿ ಹ್ವಾರೆ ಮಾಡಿದ್ರು ನೆಟ್ಟಗ ಅಚ್ಚೇರು ರಾಗಿ ಕೊಡಾಕಿಲ್ಲ. ದುಡಿಯಂಗಿಲ್ಲ ದುಗ್ಗಾಣಿ ಬಡಿಯಂಗಿಲ್ಲ ದೌಲತಮಾಡ್ತವೆ.

ಮಾರ :- ಸಂಕವ್ವ ನೀ ಆಟುಸುಮ್ಮಿರು ದೇವಿ ನಮ್ಮಯಿಸ್ಯಾನ ಹೇಳ್ತಿರೋದು. ಗೌಡ್ರು ಮನಿಗಳು ಖಾಲಿಯಾದರ ಎಲ್ಲಿಂದ ಉಂಬ್ತಿಯಾ? ಅವರಿದ್ರ ನಾವ ಕಣವ್ವ ಅವರ ಕೊಟ್ರ ನಮ್ಮ ಒಲಿ ಉರಿಯೋದು ಅವರಿಗ ನಾವು ಎರಡಬಗಿ ಬಾರದು ಬಂದಿರೂ ಗಂಡಾಂತರ ಪರಿಹಾರ ಏನೂಂತ ಕೇಳಮು ಹೇಳವ್ವ ತಾಯಿ ಏನಮಾಡಾಕ ಹೇಳು. ನಮ್ಮ ಕೈಲಾದ್ರೆ ಮಾಡೇವು. ಇಲ್ಲಕ್ರ.....

ಪೀಕಲ :- ಕೆಂದೂರಾಗ ನನತಂಗಿ ಕಿರಿ ಚೌಡಿಗ ಕ್ವಾಣ ಹೊಡಿತವ್ರೆ.... ಚರಗ ಚೆಲ್ತವ್ರೆ.

ನಿಮ್ಮಟ್ಟಿ ಗಂಡಸು ಚರಗಾ ತಂದ್ರಾತು

ಈ ಊರ ಹುಲಸು ಹೆಚ್ಚಾಗ ತೈತೆ.

ಮಂದಿ :- ಈಗ ಯಾ ಗಂಡಸ ಉಳ್ಕೊಂಡಾನಪ್ಪ ಆಪರಿ ಧೈರ್ಯಮಾಡಿ ಚರಗ ತಗೊಂಡು ಗಡಿದಾಟಿ ಓಡಿಬರೋನು?

ಪೀಕಲ :- ಮಾತ ಬಂದಾದವೆನ್ರಲಾ.... ನನಗ ಅವಮಾನ ಮಾಡಾಕ ಕರದಿದ್ರೇನು?

ಮಾರ	:-	ಅಯ್ಯೊ ನನ್ನವ್ವ ನೀ ಪವಡಿಸೋದ ಕಮ್ಮಿ ಅದ್ರಾಗ. ಮಾತಾಡ್ರಲೇ ಹಾಳಮನಿ ಸೂಳಿ ಮಕ್ಕಳ್ರ ಅದೇನ ಉತ್ತರ ಕೊಟ್ಟರಿ ಕೊಡ್ರಿ.
ಚಾಮ	:-	ಉತ್ತರ ಕೊಡಾಕ ನಾವೇನ ತುಂಬ್ಕೊಂಡಿವ.
ಸಂಕವ್ವ	:-	ಬರೋ ಬರಿ ಅಂದೆ ನೋಡೆಯಪ್ಪ. ಮೂರವರ್ಹ ಈ ಒಂದಪ ಕ್ಷಣಕೋಯ್ದು ಸಾಂಕಿಮಾಡೋದ ದುಸ್ತರ ಆಗಿರೊ ಕೈಮನಾಗೆ....
ಚಾಮ	:-	ಎಲ್ಲಿ ಹಚ್ಚಿಯ ಬೇ, ಬರಿ ಮಂದಿ ಸಂಬಂಧ ದುಡದು ದುಡದು ಸತ್ತಹ್ವಾದವಿ. ನಮ್ಮದೇನ ಆಗಲಿಲ್ಲಾ.
ಪೀಕಲ	:-	ಆಹಾ... (ನಗುವಳು).... ಜೊಬರ್ದಗೇಡಿ ನನಮಗನ ವರ್ಷ ಒಪ್ಪತ್ತೂ. ಆ ದಾನಿ ಚಾದಂಗಡಿ ತಾವ ಅಂಡೂರ್ತಿಯ. ನಿನ್ನೆಂಡ್ರು, ದುಡದ ತಂದಿದ್ದನ್ನ ಗಡದ್ದಾಗೆ ಕತ್ತರಿಸ್ತಿಯಾ.
ಚಾಮ	:-	ನನ್ನ ಕತಿ ಎಲ್ಲಾ ಪಸಂದಾಗೆ ತಿಳ್ಕಂಡಿಯಾ ಬಿಡವ್ವ. ಯಾರಿಗ ಗೊತ್ತಾದ್ರೇಟು ಬಿಟ್ರೇಟು. ಆದ್ರು ವಸಿ ಸಂಪತ್ತನ ಕೊಡವಲ್ಲಿ ನೋಡು.
ಮಾರ	:-	ಅವ್ವ, ತಾಯಿ, ಮಂದಿ ಕೂಡ ಬಾಯಿ ಹಚ್ಕೊಂಡ ಹೊತ್ಯಾಕ ಕಳದೀಯ ಹುಲಸತರೊ ಪರಿಯನ್ನ ಹೇಳಿ ನಮ್ಮ ಎದಿಭಾರನ ಆಟು ಕಮ್ಮಿ ಮಾಡು.
ಪೀಕಲ	:-	ಹೂಂ... ಹೂಂ.... ಗುದ್ದ ಮ್ಮನ ಗುಡಿ ಮುಂದಿರೊ ಗುಡಸಲ ಪುರುಷ ನನ್ನ ಭಕ್ತ ನನಗ ಪಸಂದಾಗವನೆ ಅಂವ ಒಬ್ಬನ ಈ ಕೆಲ್ಸ ಮಾಡೋ ಗಂಡಮಗ.
ಸಂಕವ್ವ	:-	ಎಯ್, ಎಲ್ಲಿ ಹಚ್ಚಿನಮವ್ವ, ಹಿಂಗಮಾಡಿ ಗಂಡನ ಕಳ್ಕೊಂಡೀನಿ ಈಗ ಇರೊ ಒಬ್ಬ ಮಗನ್ನು. ಇಲ್ಲ ಬಿಡು ಯಾರೇನು ಅಂದ್ರು ನಾ ಕಳಸಾಕಿನ ಅಲ್ಲ.
ಮಾರ	:-	ಸಂಕವ್ವ, ಎನ್ ಹಚ್ಚಿಬೇ, ಊರ ಚೌಡಿಗ ಇಲ್ಲ ಅನ್ನೊ ಧೈರ್ಯ ಬಂತೇನ ನಿನಗ. ಅಕಿ ಹೇಳಿಂದ ಮೂಗಿತು. ಏನಂತಿರಪ್ಪ.
ಮಂದಿ	:-	ಹೌದು, ಹೌದು, ಮುಗಿತು.
ಸರ್ಪ	:-	ಮುಚ್ರಲೇ ಬಾಯಿ. ಕಂಡೋರಮನಿ ಮಕ್ಕಳನ್ನ ಬಾವಿಗ ನೂಕಿ ಖುಷಿ ಪಡೋರ ನೀವು. ಯಾಕ ನಿಮ್ಮ ವಾನಿಯೊಳಗ ಹರೆಯದ ಹುಡುಗರಿಲ್ಲೇನು? ಮಾರನ ಮಗ ತಿರುಮ ಏನಾಗ್ಯಾನ. ಹಂಚನ್ಮನ' ಸಿದ್ಧನ ಮಗ ದುರಗ ಏನಾಗ್ಯಾನ. ಹಿಂದಲೋಣಿ ಪಾಕ, ಮುಂದಿನ

ಮುನಿ ಚೌಕ ಅಪಾರಲ್ಲ ಅವರ ಹೆಸರು ಯಾಕ ಹೊರಗಬರಂಗಿಲ್ಲ. ನಮ್ಮ ಮನಿಯನ್ನ ಏನ ಅಂತೇಳಿ ತಿಳ್ಕಂಡಿರೇನೋ?

ಚಾಮ :- ಅಟೆಯಾಕ್ಲ. ನಮ್ಮ ಹಟ್ಟಿ ಹುಡ್ರೆ ತರಬೇಕಂತ ಏನು ನಿಯಮ ಐತೆ. ಹಂದಿ, ನಾಯಿಗಳಂಗ ಮಂದಿ ಸಂಡಾಸಿಗ ಕೂಡ್ರುವ ಜಾಗದಾಗ ವಾಸ ಆಗಿರು ನಾವು ಈ ಕೆಲ್ಸಕ ಅದೆಂಗ ಲಾಯಕ ಅಕ್ಕೀವಿ. ಇಂತ ಕೆಲಸಕ್ಕೆ ನಮ್ಮ ಮಕ್ಕಳು.... ಬ್ಯಾರೆ ಕೆಲ್ಸಕೆ ಅವರ ಮಕ್ಕಳು ನೀನು ಬೇಧಮಾಡ್ತಿಯಲ್ಲವ್ವ.... ಇನ್ನೂ ನಮ್ಮ ಕತಿ ಮುಗದಂಗೇಯ ಬಿಡು.

ಸರ್ಪ :- ಸರಿಯಾಗ ಅಂದೆ ನೋಡಮಾವ. ನಂಬದೋರನ್ನ ಈ ದೇವರು ಕೈ ಬಿಡಾಕಿಲ್ಲಂದ, ಜಾತ್ರಿಯಾಕ ಬೇಕು ಪರಸೆಯಾಕೆ.

ಪೀಕಲ :- ಉಹೂಂ.... ಹೂಂ.... ನನ್ನ ಮಾತಿಗ ಕವಡಿ ಕಿಮ್ಮತ್ತಿಲ್ಲಾ ಅಂದ್ರ ನಾ ನಿಮ್ಮ ಹಟ್ಟಿ ಬಿಟ್ಟು ಹೊಂಟೋಯ್ತಿನಿ. ಆಮ್ಯಾಲ. ಕೋಳಿ ಕಳಿತು, ಹುಂಜಹೋಯ್ತು ಅಂತ ಬೈದ್ರೆ ಹುಷಾರ. ಕಾಡಿನ ದೇವ್ವಗಳೆದ್ದು ಹಟ್ಟಿಯೊಳಗ ಕುಣದ್ರ ನನ್ನ ಬೊಯ್ಯಬ್ಯಾಡ್ರಿ.

ಚಾಮ :- ಆಂ, ದೇವ್ವನಾ...... ಬ್ಯಾಡವ್ವತೆಪ್ಪಾತು, ಅದೊಂದ ಶಿಕ್ಷೆ ಕೊಡಬ್ಯಾಡ. ಮಕ್ಕಳು ಮರಿ ಅದಾವ....

ಸರ್ಪ :- ಏಐನ್, ಚಾವು, ದೇವ್ವ ಅಂದ್ರ ಅದೇನ ಹೆದರಿ ಉಚ್ಚಿ ಹೊಯ್ಕೊಂತಾನಂತ. ಸುಮ್ಮನಾಗು ಚೌಡವ್ವನ್ನ ಬಾಯಿಮಾಡಿಗದರ ಸೋನು ನೀ ಒಬ್ನ. ನೀನು ಹಿಂಗ ಹೊಕ್ಕೊಂಡಿ ಅಂತಂದ್ರ ಮಂದಿ ನನ್ನ ಹೆಡಮುರಗಿ ಕಟ್ತಾರ.

ಮಾರ :- ಸಾಕ ಬಂದ ಮಾಡ್ರಿ. ಆ ತಾಯಿ ಚೌಡವ್ವನ ಬಾಯಾಗ ಹೆಸರ ಬಂದೈತಂದ್ರ ಅವನ ಗಂಡ ಮಗ, ಅಪ್ಪಗ ಹುಟದೋನು. ಆಗಾಕಿಲ್ಲ ಅನ್ನಾಕಿಲ್ಲ. ಹಂಗೇನಾರ ಅಂದ್ರ ಅವನು...

ಸಂಕವ್ವ :- ಎಯ್, ಮಾರ ಮುಚ್ಚಬಾಯಿ ನನಹಾಟಗಳ್ಳ. ಯಾಕಿಂಗ ಇಲ್ಲದ್ದನ ಸೃಷ್ಟಿ ಮಾಡಿ ನನಮಗನ ಪ್ರಾಣ ತಗಿತಿಯೆ.

ಪೀಕಲ :- ಸಂಕವ್ವ ಬಾಯಿಮುಚ್ಚು. ನಿಮ್ಮ ವಂಶ ಇರೋದ ನನ್ನ ಸೇವೆ ಮಾಡಾಕ. ಅಲ್ಲ ಮದ್ವಿಯಾಗಿ ಹದಿಮೂರ ವರ್ಷ ಆದ್ರೂ ನಿನ್ನ ಹಟ್ಟಿಯೊಳಗ ಒಂದ ಹುಳಾನು ಆಗಲಿಲ್ಲಾ. ಈ ಸರ್ಪ ಯಾರ ಪ್ರಸಾದ.

ಸಂಕವ್ವ :- ಹಂಗಲ್ಲವ್ವ ನನತಾಯಿ. ಇರೋ ಒಬ್ಬಮಗನ್ನ

ಚಾಮ :- ಬೇ ಸಂಕಮ್ಮ ನೀ ಏನು ಯುದ್ಧಕ್ಕ ಕಳಸ್ತಿಲ್ಲ ಮಗನ್ನ, ಆಟು ಬಾಯಿ

ಮುಚ್ಚು. ಊರ ಸಂದಾಗಿರ ಬೇಕಂದ್ರ ನಾವು ಕೈಲಾದ್ದನ್ನ ಮಾಡಾಕಬೇಕು.

ಮಂದಿ :- ನಿಯತ್ತಿನ ಮಾತ ಅಂದನೋಡ್ರಪ್ಪ.

ಚಾಮ :- ಅಂದ್ರ ನಾ ಏನು ಬೇವರ್ಸಿ ಅಂದ್ಕೊಂಡಿರೇನ್ರಪ್ಪ. ನಾ ಯಾವತ್ತು ನ್ಯಾಯ ನಿಷ್ಠುರದ ಮಾತ ಹೇಳೋದು. ಈಗ ಬಂದಿರೊ ತುರ್ತಾದ ಆಪತ್ತಿಂದ ಪಾರಾಗೋದು ಯೋಚ್ನೆ ಮಾಡಿ, ನಂದಂಗಿರ್ಲಿ.

ಮಂದಿ :- ಚೌಡವ್ವ ಹೇಳಿಂದ ಮುಗಿತು. ಆಗೋದನ್ನ ತಿಳದ ಹೇಳ್ತಾಳ.

ಮಾರ :- ಹಟ್ಟಿ ಮಂದಿ ಒಪ್ಪಿಂದ ಆತು, ಚೌಡವ್ವನ ಖುದ್ದಾಗಿ ಬಂದು ಸರ್ಪನ ಹೆಸರ ಹೇಳ್ಯಾಳಂದ್ರ ಅದ್ರಾಗ ಏನೋ ಮರ್ಮ ಐತೆ.

* * *

ಸನ್ನಿವೇಶ–೪

ರಂಗೇಗೌಡ :- ಅಲಾ ಮಗನ ಮಾರ. ಅದೇನ ತಲಿಲೆ ನಿಂದು. ತನ್ನ ಶತ್ರು ಸೊಳ್ಳಿಗೌಡ ದುರ್ಬಲ ಆಗಬೇಕಂದ್ರ ಅವನ ಬಲಗೈ ಬಂಟ ಸರ್ಪ...

ಸಣ್ಣೆಗೌಡ :- ಎಯ್ ಹಲಕಟ್, ಬಾಯಿಮುಚ್ಚಾಲೇ ಮಂದಿ ಜಾಸೂಸಿಮಾಡ್ತಿರ್ತಾರ. ಒಂದ ಕಲ್ಲಿನಾಗ ಎರಡಹಕ್ಕಿ ಹೊಡದಿದ್ದ ನೋಡಿರಿ. ಮೂರ ಹಕ್ಕಿ ಬಲಿಯಾದ್ದನ್ನ ಕೇಳಿರೇನ.

ಮಾರ :- ಎಲ್ಡ ಹಕ್ಕಿ ಏನೋ ಸರಿ. ಈ ಮೂರನೇಯದು.

ಸಣ್ಣಗೌಡ :- ಅದೇ ಈ ಸಣ್ಣಗೌಡನ ತಲಿ.

ಮಾರ :- ಅಲ್ಲಾ ಈ ಮೂರನೇ ತಲಿ... ನಂಗ ಕುಡದ ಹೆಂಡದ ನಿಶೆ ಇಳಿದಂಗಾತು ನೋಡ್ರಿ ಒಡೆಯ.

ರಂಗೇಗೌಡ :- ಅದಕ್ಕ ಅಲ್ವೆನಲೆ ಸಣ್ಣ ನಿನ್ನ ನನತಾವ ಇಟ್ಕೊಂಡಿರೋದು. ಖಾಲಿಪೊಕಟ್ ಅಂದ್ಕಂಡೇನು? ಯಾವದಾಳ, ಯಾವಾಗ ಸರಸಬೇಕು ಅದ್ರಿಂದ ಯಾವ ಕಾಯಿನ ಹೊಡದ ಹೊರಗ ಹಾಕಬೇಕನ್ನೋ ಆಟ ನಿನ್ನೊಬ್ಬನಿಗ ತಿಳಿದಿರೋದು ಮಹಾಭಾರತದ ಆ ಶಕುನಿ ಹಂಗ.

ಮಾರ :- ಥೇ, ಆ ಮೂರನೆ ಕಾಯಿ.

ರಂಗೆಗೌಡ :- ಲೇ ಮಾರ ವಯಸ್ಸಕಳದೆ ವಿನಃ ಬುದ್ದಿ ಬರಲಿಲ್ಲಾ. ಎಲ್ಲಾನು ಹೇಳಾಕ ಆಗಂಗಿಲ್ಲ ಟೈಂ ಬಂದಾಗ....

ಸಣ್ಣಗೌಡ :- ಅಂತು ಗೌಡ ನೀ ಅಂದ್ಕೊಂಡಿದ್ದು ಕೈ ಗೂಡೊ ಕಾಲ ಹತ್ರ ಬಂತು.

ರಂಗೇಗೌಡ :- ಹಾ.... (ನಗುವನು) ಹಾ.....

ಇದೇ ರಾಜಕೀಯ. ನನ್ನ ಇಬ್ಬರು ಶತ್ರುಗಳ ನಿರ್ನಾಮ ಆಗಾಕಬೇಕು, ಆಗೇ ಆಗತೈತಿ.

ಒಂದೇ ಒಂದು ಸಣ್ಣ ಸುಳ್ಳು.... ಅವಳು ಅವನನ್ನ ಮುಟ್ಟಿದ್ದು ಇಷ್ಟೊಂದು ಭೀಕರ ಪರಿಣಾಮ ಬೀರುತ್ತಂತ.....ನಾನಂತು ಕನಸ್ಸಲ್ಲಿ ಅಂದಕೊಂಡಿರಲಿಲ್ಲಾ..

ಮಾರ :- ಅಂದ್ರ..... ಅಂವss ಏನು.....

ಹೂಂ....

ಸಣ್ಣಗೌಡ :- ಷ್! ಈ ಕತೆಗೆ ಅದೊಂದೆ ಸೂತ್ರ ಬಾಯಿ ಮುಚ್ಕೊಂಡು ಹದಿನೈದ ದಿನದಾಗ ಕೆಂದೂರ ಚೌಡವ್ವಾಗ ಕ್ವಾಣಕಡದು ಚರಗ ಚೆಲ್ತಾರ. ಅವತ್ತಿನ ಮಟ್ಟ ಈ ಸುದ್ದಿ ಹಿಂಗ ಬಿಸಿಬಿಸಿಯಾಗಿ ಚರ್ಚೆಯಾಗ್ತಿರಬೇಕು. ರಂಗೇಗೌಡ ಒಂದಿಷ್ಟು ಕಾಸನ ಈ ಬೋಳಿಮಗ ಮಾರಗ ಕೊಡು ಕುಡಸೋರಿಗ ಕುಡಿಸಿ ತಿನ್ನೋರಿ ತಿನ್ನಿಸಿ ಸುದ್ಧಿಯನ್ನು ತಣ್ಣಗಾಗದಂಗ ನೋಡಿಕೊಳ್ಳಲಿ.

ರಂಗೇಗೌಡ :- ಈ ಸೂಳಿಮಕ್ಕಳದೇನ್ಲ. ಬಾಟಲಿ ಹೆಂಡಕ್ಕ ಮನಿ ಕದ ತಗಿಯೋರು. ಏಯ್, ಮಾರ, ಇಲ್ಲಿ ನಡದದ್ದನ ಊರಾಗ ಸಾರಬ್ಯಾಡ ನೀ ನನ್ನ ಖಾಸಮನಷ್ಯ ಅಂತ ಈ ಸವಲತ ನಿನಗ ಕೊಟ್ಟನಿ ಇಲ್ಲಿಕ್ರ....

ಮಾರ :- ನನ್ನ ನಂಬಿ ಬುದ್ದಿ ನಂಬಿ.

* * *

ಸನ್ನಿವೇಶ–೫

ಸರ್ಪ ಗುಡಿಸಲ ಮುಂದೆ ಖಿನ್ನನಾಗಿ ತಿರುಗಾಡ್ತ ಇದ್ದಾನೆ. ವ್ಯವಸ್ಥೆಯ ಬಗ್ಗೆ ಜಿಗುಪ್ಸೆ ಪಟ್ಟು ತನಗೊದಗಿದ ಪರಿಸ್ಥಿತಿಯಿಂದ ಹೊರಗ ಬರೋದು ಹೇಗೆಂದು ಆಲೋಚಿಸ್ತಿದ್ದಾನೆ.

ಸರ್ಪ :– (ಅಲ್ಲೆಯಿಂದ ಕಲ್ಲ ಮೇಲೆ ಕುಳಿತುರೊಟ್ಟಿ ಮಾಡ್ತಿರೊ ಸಂಕವ್ವನ ನೋಡ್ತಿದ್ದಾನೆ).

(ಸ್ವಗತ) ಬದುಕ ಹಿಂಗ ಇದಕಿದ್ದಂಗೆ ಮುಳಗಿಹೋದ್ರ ಸಂಸಾರದ ಗತಿ ಏನು? ಹುಟ್ಟಿದ ಮಗನ ಮಾರಿ ನೋಡಿಲ್ಲ ಮೇಲ್ಜಾತಿ ಮಂದಿ ನನ್ನ ಚಟ್ಟಕಟ್ಟಾಗ ತಯಾರ ಆಗ್ಯಾರ. ಒಂದು ಊರಬಿಟ್ಟು ದೂರ ಓಡಿಹೋಗಬೇಕು. ಹಿಂದ ಮಂದಿ ಹೇಡಿ ಸೂಳಿಮಗ ಎದರಿಸೋದಕ ಆಗದೆ ಓಡಿ ಹೋಗ್ಯಾನ ನೋಡಂತ ಆಡಿಕೊಳ್ತಾರ. ಇನ್ನೂ ಓಡಿ ಹೋದ್ರು ಎಲ್ಲಿ ಗಂಟ ಓಡಬಹುದು? ಹ್ವಾದ್ರ ಈ ಊರನ ಶಾಶ್ವತವಾಗಿ ಮರಿಬೇಕು.

ಸಂಕವ್ವ :– ಮಂದಿಮಾತಿಗ ನೀ ತಲಿಕೆಡಸ್ಕೋ ಬ್ಯಾಡ. ಅಷ್ಟಕ್ಕೂ ಊರಿಗ ನಮ್ಮ ಹಿರಿಕರೇನು ನಮ್ಮನ್ನ ಉಂಬಳಿ ಬಿಟ್ಟಿಲ್ಲ. ನೀ ಧೈರ್ಯದಿಂದ ಎದುರಿಸ ಮಗ, ಯಾಕಿಂಗ ಗರಬಡದವನಂಗ ಕುಂತೀಯಾ.

C–8

ಸರ್ಪ :- ಅಲ್ಲಬೇ ಈಗ ಬಂದಿರೋದು ನಾನ ಮಾಡದ ಅಪರಾಧಕ ಶಿಕ್ಷೆಯಾಗ್ತಿದೆ. ಆ ಸೊಳ್ಳಿಗೌಡನ ಸಾವಾಸಮಾಡೆ ನಾ ಕೆಟ್ಟೆ.

ಸಂಕವ್ವ :- ನಾ ಬಡಕೊಂಡೆ ನನಮಾತ ನೀ ಕೇಳಲಿಲ್ಲ. ಅವರ ಮನಿ ಸವಾಸವಾಡಿದೋರ ಮನಿತನ ಮುಳಿಗಿ ಹೋಗ್ಯಾವಪ್ಪ ಮುಳಗಿಹೋಗ್ಯಾವ. ಆದ್ರ ಆ ಪಾಪಿಗಳಿಗ ಯಾರ ಶಾಪಾನು ತಟ್ಟಿಲ್ಲಾ. ಅವರ ವಂಶ ವಿಷದ ಬಳ್ಳಿ ಹಂಗ ಮುಂದಹೊಂಟೈತೆ.

ಸರ್ಪ :- ಯವ್ವಾ ಬೇ, ಒಂದಲ್ಲಾ ಒಂದ ದಿನ ಪ್ರತಿಯೊಂದು ಆರಂಭಕ್ಕೂ ಅಂತ್ಯ ಬಂದೇ ಬರತೈತಬೇ. ನೀ ಹಂಗ ಅನ್ನಾಕ ಹೋಗ ಬ್ಯಾಡ. ನಿನ್ನ ಕಣ್ಣಿದ್ರಿಗ ಏನಾಗುತ್ತೆ ನೋಡ್ತಿ ನೀನು. ಅಲ್ಲಿ ಮಟ ನಾ ಬದಕಿದ್ರ.....

ಸಂಕವ್ವ :- ಏಯ್, ಬೇವರ್ಸಿ ಸಂಜಿಮುಂದ ಎಂಥ ಮಾತ ಹೇಳ್ತಿಯಾ, ನಿನಗೇನು ಬುದ್ದಿ ಕೆಟ್ಟೈತೇನು.

ಸರ್ಪ :- ಇದು ಸತ್ಯ ಕಣಬೇ....... ನಾನು ಅಂತಹದೊಂದು ಚಕ್ರವ್ಯೂಹ್ಯದೊಳಗ ಸಿಕ್ಕುಹಾಕ್ಕೊಂಡೀನಿ. ಒಳಗ ಹೋಗೋದ ಒಂದ. ಹೊರಗ ಬರಾಕ ದಾರಿನ ಇಲ್ಲ.

ಸಂಕವ್ವ :- ಲೇ ನೀ ನನ್ನ ಮಗ ಕಣ್ಲೆ. ಹತ್ತಾಳಬಂದ್ರುವೆ ಚಿತ್ತಮಾಡೊ ತಾಕತ್ತಿರೋನು ಅಂತಾದ್ರಾಗ ಹೆಂಗಸರ‌ಗೆ ಅದೇನೊ ಚಕ್ರವ್ಯೂಹ ಅಂತೇಳಿ ಹೆದರಿಸ್ತಿ ಯಲ್ಲಾ

ಸರ್ಪ :- ಮುಂದ ಬಂದ್ರ ಹತ್ಯಾಕ ಇಪ್ಪತ್ತು ಸೈ. ಆದ್ರ ಮೋಸಮಾಡಿದ್ರ ಒಬ್ನೆ ಹ್ಯಾಂಗಬೆ. ನನ್ನ ತಾಕತ್ತಿನ ಅಂದಾಜು, ಈ ಊರಾಗಿರೊ ಎಲ್ಲಾ ದೊಡ್ಡ ಕುಳಿಗಳಿಗೂ ಗೊತ್ತೈತೆ.

ಸಂಕವ್ವ :- ಹಿಂಗ, ಅರ್ಜುನಗ ಸಂಕಟಕಾಲ ಬಂದೊತ್ತಿನ್ಯಾಗ ಶ್ರೀಕೃಷ್ಣಪರಮಾತ್ಮ ಕಾಪಾಡಿದ್ನಂತೆ. ನಿಂಗೂ ಯಾವದಾರು ದೇವರು ಅಡ್ಡ ಬಂದಾವು ಬಿಡಮಗ. ಯಾಕ ಯೊಚ್ನೆ ಮಾಡೀಯ. ಬಾ ರೊಟ್ಟಿ ಮುಳಗಾಯಿ ಸುಟ್ಟು, ಹಿಂಡಿ ಕಿವುಚೇನಿ. ತಿಂದ್ಕೊಂಡು ನಿರುಮಳವಾಗಿ ಅಡ್ಡಾಗು. ನಾಳೆ ಅನ್ನೊ ಅಷ್ಟೊತ್ತಿಗೆ ಎಲ್ಲಾ ಸರಿಯಾಗುತ್ತೆ.

* * *

ಸನ್ನಿವೇಶ–೬

(ಕಂಟಮಟ ಕುಡದು ಗಲಾಟೆ ಮಾಡ್ಕಂತ, ನಾಯಿ ಬೊಗಳೋದರ ಮೇಲೆ ಹರಿಹಾಯ್ತ ಮಾರ, ಚಾಮ, ದುರ್ಗ ಬರ್ತಾವ್ರೆ)

ಮಾರ :- ಹಾಳಮನಿ ನಾಯಿಗಳೂ ನಮ್ಮಂಗೇಯ, ಯಾರದ್ರಿಂತವೂ ಅವರನ್ನ ಮರತು ಬೊಗ್ಗೋದಕ್ಕೆ ಸುರು ಹಚ್ಕೊಂತಾವ. ಮುಗಿತ ನೋಡಪ್ಪ, ಇಡಿ ಹಟ್ಟಿ ಮಂದಿನ ಎಬ್ಬಿಸಿ ನೀವು ಕುಡಕ್ರು ಅನ್ನೋದನ್ನ ಸಾಬೀತ ಪಡಸ್ತವೆ... ಹಚ್ಚಾ... ಎಯ್, ನಾಯಿ ಗುಟ್ಟುದ್ದೆ.

ಚಾಮ :- ಲೇ ಮಾರ, ಕುಡದ್ರುವೇ ಲೆಕ್ಕಾಚಾರವಾಗೆ ಮಾತಾಡಬೇಕ ಕಣಪ್ಪ. ಅಲ್ಲಾ, ಅದು ನಾಯಿ ಅಲ್ಲದೆ ಮತ್ತಿನ್ನೇನು ನಂಗ ಹುಟ್ಟುತ್ತಾ. ನಾಯಿ ನಾಯಿಗೆ ಹುಟ್ಟೋದು ನರಿ ನರಿಗೆ ಹುಟ್ಟೋದು ಮನುಷ್ಯ ಮನುಷ್ಯನಿಗೆ ಹುಟ್ಟೋದು. ಕುಡದಾಗ ಹಂಗೆಲ್ಲಾ ಬಾಯಿ ತಪ್ಪಿ ಅನ್ನ ಬಾರದು.... ಅದು ತೆಪ್ಪಾಗುತ್ತೆ. ಈಗ ಎಯ್, ಬಾಗಲತಗಿಯೇ ಅಂತಿಯಾ. ನಿನ್ನ ಹೆಂಡ್ರು ತಟ್ಟಿಸರಸ್ತಳೆ. ಅವಳನ್ನ ಏನಂತಿಯಾ.

ಮರ :- ಏನು ಅನ್ನಾಕ ಆದೀತು. ಊಂ. ನನ್ನ ಚಿನ್ನ, ರನ್ನ ಬಂಗಾರ.

ಚಾಮ :- ಹಂಗೇ, ಇದು ಕೂಡ. ನಾಯಿ ನಾಯಿಗೆ ಹುಟ್ಟತ್ತೆ ಮತ್ತೆ ನರಿ

ಮಾರ :- ನಾಯಿಗೆ.... ತಪ್ಪು ತಪ್ಪು ನಂಗೆ

ದುರ್ಗ :- ನನಮಕ್ಕಳಿಗ ಮುಕ್ಕಾರೆ ಏರೈತೆ ಹೆಂಡ. ನಾಯಿಗೂ ನರಿಗೂ ವ್ಯತ್ಯಾಸ ಕಾಣ್ತಾನೆ ಇಲ್ಲಾ. ಏನಪ್ಪ ಈ ರಾತ್ರಿ, ಛೀ, ತುಳದ ಬಿಟ್ಟೆ....

ಅ-3

ಏನಿದು...... ಥು ಯಾವನೋ ಇಲ್ಲೆ ಕಕ್ಕ ಮಾಡ್ಕಂಡವ್ನೆ ಅಯ್ಯಪ್ಪ ಸದ್ಯ ಬಾಯಲ್ಲಿ ಇಟ್ಕಳ್ಳಿಲ್ಲಾ ಬೆಳ್ಳನ್ನ, ಎಯ್, ನನ್ನ ಮನಿ ಬಂತು. ಹುಷರಾಗಿ ಮನಿಗ ಹೋಗಿ ಮಂದಿಮನೀಗ ಹೋದಿರಾ ಮತ್ತ.

ಚಾಮ :- ನಮಗೇನು ಅಂತದೊಡ್ಡ ಕುಡಕರು ಅಂದ್ಕೊಂಡೇನು? ಇಲ್ಲಪ್ಪ ಒಸಿ ಜಾಸ್ತಿ ಆಗೈತೆ ಆತೇಯ ಉಳದಂಗೆ ಸರಿಯಾಗೆ ಅದೀವಿ.

ಮಾರ :- ಬರೋಬರಿ. ಎಯ್, ದುರ್ಗಾ ಏನೇ ಮರ್ತರು ಸರ್ಪನ ವಿಷಯ ಮರಿಯಂಗಿಲ್ಲ.

ದುರ್ಗ :- ಥು ಥು, ಅಥಂಗೆ ಮರಿಯಾಕ ಸಾದ್ಯ. ಈಗಲೇ ನಡೀರ ಅವನ ಮನೀಗ

ಚಾಮ :- ದಡ್ಡ, ಈಗ ಮಕ್ಕೊಂಡಿರ್ತಾರ. ಮುಂಜಾನೆ ಹೊತ್ತರೆ ಎದ್ದು ಏನಮಾಡಿಯೆ ಅದನ್ನೆ ಮಾಡುವಿಯಂತೆ ಹೋಗಿ ಬಿದ್ಕಹೋಗು ಮೂಲಿ ಮುಕ್ಕಟ್ಟಿನ್ಯಾಗೆ.

ಮಾರ :- ಚಾಮಣ್ಣ, ಏಯ್, ಚಾಮ ಬರ್ಲೆನಪ್ಪಾ ನಾನು ಹೊತ್ತು ಬಾಳ ಆಗೈತೆ ಹೊತ್ತಾರೆ ಎದ್ದು ಮತ್ತ ಮಲಗಬೇಕು ನಡಿ ಅಡ್ಡಾಗು. ಅಲ್ಲಾ ನಿನ್ನ ಬಿಡಾಕ ಬರ್ಲೇನು ಮನಿಮಟ.

ಚಾಮ :- ಬೇಡ ಬೇಡ ಕಟ್ಟಿ ತಡಾದ್ರ ನನಮನಿ....
ಆದ್ರ ಮುಂಜಾನಿ ಆ ಪೀಕಲ ಪೂಜಾರಿ ಏನಂದ್ನಲ್ಲಾ

ಮಾರ :- ಓ.... ಆದ, ದೇವ ಮಾತಾನೆಲ್ಲ ಹಟ್ಟಿಯೊಳಗೆ ಬಿಡ್ತಿನಿ ಅಂದ್ನಪ್ಪ.

ಚಾಮ :- ಲೇ ಮಾರಣ್ಣ ವಸಿದೂರ ನಮ್ಮ ಮನಿತಂಕ ಬಾರೋ ಯಾಕೊನನಗ...

ಮಾರ :- ಎಯ್, ನಿನಮಂಜಾಳಾಗ, ಏನಹೆದರ್ತಿಯಲೇಯಪ್ಪ ನೀನು ಅವು ನಿಮ್ಮಂಗ ಕಾಣದಂಗೆ ಬರಕರ್ತಾವಪ್ಪ. ಯಾವಾನಾರು ಹೊತ್ತಿಲ್ಲದ ಹೊತ್ನಾಗೆ ಸಿಕ್ಕ್ರ ಮಾತ್ರ ಬಿಡಾಕಿಲ್ಲ ಅಂದೆ.

ಚಾಮ :- ಈಗ ಸೌರಾತ್ರಿ ತಾನೆ? ಈಗ ದೆವ್ವ ಗೋರಿ ಬಿಟ್ಟು ಏಳೊ ಹೊತ್ತು..... ಆ ಕಟ್ಟಿಮಟ ಬಂದು ನನ್ನ ಹೆಂಡ್ರು ಕದ ತಗಿಯೋ ಮಟ ನಿಲ್ಲು ಸಾಕು ಆಮ್ಯಾಕಿಂದ ನಾ ಒಳಗ ಹೊಂಟೋಯ್ತಿನಿ.

ಮಾರ :- ಲೇ ಚಾಮ, ಅದ ನನಗ್ಗೊತ್ತಿಲ್ವಾ, ನಡಿ ಅತ್ಲಗೆ ಯಾಕಿಂಗೆ ಹೊತ್ತಿಲ್ಲ ಹೊತ್ನಾಗೆ ನನ್ನ ಜೀವ ಹಿಂಡ್ತಿಯಾ.

ಚಾಮ :- ಅದು ಹಂಗಲ್ಲ ಮಾರಣ್ಣ, ಈ ದೇವ್ವಬೂತ ಅಂದ್ರೆ ಆಗಾಕಿಕಲ್ಲ ನೋಡ ನನಗ.
ಅದೇನೊ ಮೈಯಾಗ ಸಣ್ಣನಡಕ ಅಂತೀನಿ.

ಮಾರ :- ಇವ್ನಪ್ಪನ ಈ ಹಾಳಮನಿ ಯೋಗ ಕಟ್ಕಂಡ ನನಗ ಏಗಾಕ ಆಗಾಕಿಲ್ಲ ಒಮ್ಮೆ ಹೌದಂತಾನವ್ವ ಮತ್ತೊಮ್ಮೆ ಹಂಗ್ಯಾಕಂತ ಪ್ರಶ್ನೆ ಮಾಡ್ತಾನ. ಇವನೇನ ಶ್ಯಾಣಾನೋ? ದಡ್ಡನೋ ಒಂದು ತಿಳಿದಂಗಾಗ್ಯೆತೊ ಮರಾಯ.

ಚಾಮ :- ಏನಂದೆ.

ಮಾರ :- ನಿನಗ ನಾ ಏನ ಹೇಳಾಕ ಸಾಧ್ಯ. ಏನು ಹೇಳಲಿಲ್ಲಾ ಅಂದಂಗ ಆ ವಿಷ್ಯ ಮರ್ತಿಲ್ಲಾ ತಾನೆ.

ಚಾಮ :- ಯಾ ವಿಷಯ ಅಂತೀಯಾ

ಮಾರ :- ನನ್ನ ಎಕ್ಕಡ ತಗೊಂಡ ನಾನ ಹೊಡ್ಕಬೇಕು ಲೇ ಕೆಪ್ಪ ಬಡ್ಡಿ ಮಗನ ನಿನಗ ಕಂಟ ಮಟ ಸರಾಯಿ ಕುಡ್ಸಿದ ಯಾರು?

ಚಾಮ :- ನೀನು.

ಮಾರ :- ಯಾಕೆ?

ಚಾಮ :- ಗೊತ್ತಿಲ್ಲ

ಮಾರ :- ತಗಳಪ್ಪ, ಇಂವಽಽ ನಮ್ಮ ಮಾವನ ಮಗ ಖಾಲಿ ಪುಗಸಟ್ಟೆ ಸರಾಯಿ ಕುಡ್ಸಿಮ್ಯಾಲ ತಲೆಬಾಡ ಕೊಡ್ಸಾಕ. ಲೇ ಅದು ಬಂದು, ಆ ಸರ್ಪ...

ಚಾಮ :- ಎಯ್, ಗೊತ್ತಾತಬಿಡು. ನನ್ನೇನು ಆಟೊಂದು ಎಬಡನ್ನ ಮಾಡಿದ್ದೇನು. ನಿಂಗಿಂತ ಶಾಸ್ತ್ರ ನಾನು ತಿಳ್ಕ.

ಮಾರ :- ಹೌದ, ಏನ ಆ ಸರ್ಪನ ಕತಿ ಹೇಳಪ್ಪ

ಚಾಮ :- ಅಂವ, ನಮ್ಮ ಹಟ್ಟಿಯೊಳಗಿರೊ ಸೊಳ್ಳಿಗೌಡನ ಖಾಸ ಮನುಷ್ಯ.

ಮಾರ :- ಹಣಿ ಹಣಿ ಬಡ್ಕೊ ಬೇಕಪ್ಪ ಇವನ ಕಾಲಾಗ. ಅದಲ್ಲಾ ಕುಡಿಯಾಕ ಮುಂಚೆ ಏನ ವಿಷಯ ಮಾತಾಡಿದ್ದಿ.... ಹೇಳು, ಹೇಳು. ಊಹೂಂ.

ಚಾಮ :- ಅದು ಯಾ ಮಗನಿಗ ನೆಪ್ಪಾಗೈತ್ಯೆತೊ ಮರಾಯ. ಹೊತ್ತಾರೆ ನೊಡಾಮು ನಿದ್ದಿಬಂದೈತೆ ಹೋಕ್ಕಿನಿ ಅಗ ನನ್ನೆಂಡ್ರು, ಬಾಗಲ ತಗಿತವಳೆ.

* * *

ದೃಶ್ಯ–೪
ಸನ್ನಿವೇಶ–೧

(ಸೊಳ್ಳೆಗೌಡನ ಮನಿ, ಏನೂ ಆಗದವನಂಗೆ ನಂಬಿಕೆಯಿಂದಲೆ ಅವನನ್ನ ಕರಿಯಲಿಕ್ಕೆ ಕಳುಹಿಸಿದ್ದಾನೆ)

ಸೊಳ್ಳೆಗೌಡ :– ಲೇ ತೀಟೆಗೌಡ ಯಾಕೋ ಆ ಮಗ ಸರ್ಪ ಈ ಕಡಿಗ ಹಾಯವಲ್ಲನಲ್ಲ ಏನಕತಿ ಅಂತ.

ತೀಟೆಗೇಡ :– ಏನೊಪ್ಪ, ನಿನ ಚೇಲ ಅಲ್ವಾ ನಿನಗ ಗೊತ್ತು. ಎಲ್ಲಿ ನಿನ್ನಾಳು ದುರ್ಗ ಕಳಸು ಎಲ್ಲಾದನ ಎಳ್ಕಂಡ ಬರ್‍ಲಿ

ಸೊಳ್ಳೆಗೌಡ :– ದುರ್ಗ ..... ಲೇ ದುರ್ಗ.....

ದುರ್ಗ :– ಬುದ್ಧಿ ಕರದ್ರಾ......

ಸೊಳ್ಳೆಗೌಡ :– ಎಲ್ಲಲೇ ಸರ್ಪ. ಎಲ್ಲೂ ಕಾಣವಲ್ಲ

ದುರ್ಗ :– ಅದೇನೋ ಬುದ್ದಿ ಗುಡಿಸಲು ಬಿಟ್ಟು ಹೊರಾಗ ಹೊಂಡ್ತಾನ ಇಲ್ಲ. ಅವನೆಂಡ್ರು ಗಂಡ ಮಗೀನ ಜನ್ಮ ಕೊಟ್ಟವಳೆ ಒಂದುವರಿ ತಿಂಗಳಾತು ಅಲ್ಲಿ ಕೂಡ ಹೊಗೆಯಿಲ್ಲ.

ಸೊಳ್ಳೆಗೌಡ :– ಏನು? ಅವನಿಗ ಗಂಡಮಗ ಹುಟ್ಟವ್ನ
(ಸ್ವಗತ) ಅವನು ನನಕೈಯಾರ ಸಾಯ್ತನ ಬಿಡು. ನೋಡು, ಹೋಗಿ ಧಣೇರು ಕರ್‍ದಾರಂತ ಅವನ್ನ ಕರ್‍ಕಂಡ ಬಂದ ಬೀಡು ನಾವಿಲ್ಲಿ ಕಾಯ್ತಿರ್‍ತಿವಿ.

ದುರ್ಗ :– ಆಗವಲ್ದ್ಯಾಕ ಬುದ್ದಿ. ಹಿಂಗೋಗಿ ಹಂಗ ಬಂದೆ

ತೀಟೆಗೌಡ :– (ಹೋದ ಎಂಬುದನ್ನ ನಿಶ್ಚಿತಮಾಡಿಕೊಂಡವನೆ)

C–10

ಲೇ ಗೌಡ, ನಿಂದೇನಲೆ ಪಿಂಡ....
ನಿನ್ನ ಚೇಲ ಹೆಂಗೊ ತಲೆ ಸವರಿರ್ತಿಯಾ ಬಿಡು ಅದಕ್ಕೆ ತಾನೆ ಅವನನ್ನ ಬಗಲಾಗ ಇಟ್ಕೊಂಡಿರೋದು ನೀ.

ಸೊಳ್ಳೆಗೌಡ :- ಎಯ್, ಇಲ್ಲಾ ಕಣಲೇ, ಆ ಮಗ ಮದವಿಯಾಗಿರೋದನ್ನ ಆರತಿಂಗಳು ಮುಚ್ಚಿಟ್ಟ ಅಕಿ ಹೆರಿಗೆಗೆ ತೌರ ಮನಿಗ ಹೋದಿಂದ ಬಂದ ಹೇಳ್ತಾನ. ಆದ್ರ ಬಿಟ್ಟಿ ಬಂದ್ಲು ಅಂತ ನನ್ನ ಹೆಂಡ್ರತಾವ ಸಲಿಗೆಯಿಂದ ಮ್ಯಾಲಬಿಳ್ತಾನ.

ತೀಟೆಗೌಡ :- ಮ್ಯಾಲಬಿದ್ದು ಸುಮ್ನೆ ಬಿಟ್ಟಿದ್ರೆ ಪರವಾಗಿಲ್ಲ ಉಳಮೆ ಮಾಡಿ ಬೀಜ ಬಿತ್ತಿದ್ನಂದ್ರ

ಸೊಳ್ಳೆಗೌಡ :- (ಅವನ ಕೊರಳ ಪಟ್ಟಿ ಹಿಡದು) ಎಯ್, ತೀಟೆಗೌಡ ಬಾಯಿ ಬಿಗ ಹಿಡದು ಮಾತಾಡು. ಹಂಗೇನಾರು ಆಗಿದ್ರ ತಾಯಿ ಮಗವನ್ನ ಕೊಚ್ಚಿಹಾಕಿ ನಾಯಿನರಿಗೆ ಆಹಾರ ಮಾಡಿ ಬಿಡ್ತಿನಿ.

ತೀಟೆಗೌಡ :- ಕಾಲಬದಲಾಗ್ತಿದೆ ನೀ ಏನು ಮಾಡ್ಕೋಳಾಕ ಆಗಾಕಿಲ್ಲ. ಹೇಳೋದ ಆಟೇಯ.

ಸೊಳ್ಳೆಗೌಡ :- ಕಾಲಯಾವದಾದರೇನು? ಅದನ್ನ ನಮಗ ಬೇಕಾದಂಗ ಬದಲಾಯಿಸಿಕೊಂಡು ಬದುಕೋನೆ ಬುದ್ದಿವಂತ. ಅದಕ್ಕೆ ತಾನೆ ಕೆಳಜಾತಿ ಮಂದಿ ಆಕೋಳಚೆಯೊಳಗ ಬದಕಿರೋದು.

ತೀಟೆಗೌಡ :- ಲೇ, ಅಲ್ನೋಡು ನಿನ್ನ ಚೇಲ ಸರ್ಪ. ನಿನಗವನು ತಿಳಿಯದಂಗ ವರ್ತನೆಮಾಡು. ಯಾಕಂದರ ಬಲಿಹಾಕೋನು ಚಾಣಕ್ಷನಾಗಿರಬೇಕು. ಮಿಕ ಒಮ್ಮೆ ಸಿಕ್ಕಾಕಿಕೊಂಡ್ರೆ ಬಿಡಸ್ಕೊಂಡಿರಬಾರದು.

ದುರ್ಗ :- ಬುದ್ದಿ ಸರ್ಪನ್ನ ಕರ್ಕೊಂಡು ಬಂದೀನಿ ನೋಡ್ರಿ.

ಸರ್ಪ :- (ಎಂದಿನ ಗತ್ತಿನಲ್ಲಿ) ಏನ ಬುದ್ದಿ ಕರದದ್ದು ನಿಮ್ಮ ಹಳೆ ಕೆಲಸಗಳಿಗೆ ಕರದಿದ್ರ ಈಗ ನಾನು ಅವನೆಲ್ಲಾ ಮಾಡೋದ ಬಿಟ್ಟಿವ್ನಿ

ಸೊಳ್ಳೆಗೌಡ :- ಯಾಕಲೇ ಹಿಂಗಮಾತಾಡ್ತಿಯೆ, ಏನಾಯ್ತು ನಿನಗೆ ಯಾಕಿಂಗ ಮಾತಾಡಾಕ ಹತ್ತಿಯ. ನೀನ ಹಂಗಂದ್ರ ಹ್ಯಾಂಗ

ಸರ್ಪ :- ಯಾಕೋ ಮೈಯಾಗ ಪಾಡಿಲ್ಲ

ತೀಟೆಗೌಡ :- ಅಂದ್ರ....

ಸರ್ಪ :- ಯಾಕೋ ಮನಸ್ಸ ಸರಿ ಇಲ್ಲಾ.

ತೀಟೆಗೌಡ :- ಏನಾಯ್ತಪ್ಪ ಅಂತೋದು.

ಸೊಳ್ಳೆಗೌಡ :- ಅಲ್ಲಲೇ ಇಷ್ಟೊಂದು ದಿನಗಳಿಂದ ಮನಿಕಡಿಗ ಹಾಯಲೇ ಇಲ್ಲಾ ಅಂತ ಬೇಜಾರೇನಪ್ಪ

ಸರ್ಪ :- ಅಂತಹದ್ದೇನು ಇಲ್ಲಾ ಬಿಡಿಬುದ್ಧಿ.

ತೀಟೆಗೌಡ :- ನಮ್ಮೆದುರಿಗೆ ಹೇಳಲಾರದಂತ ವಿಷಯ ಅದೇನಪ್ಪ.

ಸರ್ಪ :- ನಮ್ಮಂತ ಸಣ್ಣ ಮಂದಿತಾವ ಅದೇನ ವಿಷಯ ಇರುತ್ತೆ ಬುದ್ಧಿ ನಾವು ಅಂದ್ರೆ ನಿಮ್ಮ ಜೀತದಾಳಗಳು ನಮಗ್ಯಾವ ಸುಖ ಸಂತೋಷ ಏನಿದ್ರೂವೆ ಬರಿಗೋಳೆ. ಮೇಲಿಂದ ನೋವು ಕೆಳಗಿಂದನೂವೆ ನೊವೆ. ನಮ್ಮ ಜೀವನಾನೆ ಒಂದು ಅನಾಹುತ ಬದಕಬೇಕು ಬದುಕೀವಿ ಆಟೇಯ

ಸೊಳ್ಳೆಗೌಡ :- ಏನ್ಲೆ ಸರ್ಪ ದೊಡ್ಡ ತತ್ವಜ್ಞಾನಿ ಆದಂಗೈತೆ.

ಸರ್ಪ :- ನಾಷ್ಯವ ಜ್ಞಾನಿ ಒಡೆಯ ನಿಮ್ಮ ಮೆಚ್ಚಿತಾವ ಕುಂದ್ರೊಮಂದಿ.

ತೀಟೆಗೌಡ :- ಏನಲೇ ನಾಲಗಿ ಬಾರಿ ಉದ್ದ ಬಿಡಾಕತ್ತಿಯೇ ಏನ್ಸಮಾಚಾರ.

ಸೊಳ್ಳೆಗೌಡ :- ಲೇ ತೀಟೆಗೌಡ ನೀ ಯಾಕಲ ಹಿಂಗ ಆಯಾಸ ತಂಗೊಂಡಿಯ

ತೀಟೆಗೌಡ :- ನೀ ಏನಾರು ಹೇಳಲೆ ಸೊಳ್ಳೆಗೌಡ ಕಾಲ ಅನ್ನೋದು ಎಕ್ಕುಟ್ಟೋತ್ತ್ಲ.

* * *

C - 16

ಸನ್ನಿವೇಶ–೨

(ಇಡಿ ಊರಮಂದಿ ಕುಂತವರೆ ಸರ್ಪ ಮತ್ತ ಅವನ ಹಟ್ಟಿಮಂದಿ ಜನರ ಎದುರಿಗೆ ಕೈಕಟ್ಕೊಂಡು ನಿಂತವಳೆ. ಏನಾಗುವುದು ಜನರ ಎದುರಿಗೆ ಕೈಕಟ್ಕೊಂಡು ನಿಂತವಕಿ. ಏನಾಗುವುದು ಎಂಬ ಆತಂಕ)

ಸಾದಲಿಂಗಗೌಡ :– ಹೂಂ..... ಮಂದಿ ಎಲ್ಲಾ ಬಂದ್ರೇನಪ್ಪ.

ಚಾಮ :– (ದೂರದಿಂದಲೆ ಕೈಕಟ್ಕೊಂಡು ನಿಂತವನು) ಬಂದಗೈತೆ ಸ್ವಾಮಿ

ರಂಗೇಗೌಡ :– ಯಾರಾದ್ರು, ಪ್ರಮುಖರು ಬರೋರವ್ರ

ಸೊಳ್ಳೆಗೌಡ :– ಯಾರು ಇರ್ಲ್ರಿಕ್ಕಿಲ್ಲಾ ಆರಂಭಮಾಡಬಹುದು.

ಯಂಕಟರಮಣಭಟ್ಟ :– ಊರ ಮಂದಿ ಸೇರಿರೊ ವಿಷಯ ಏನಪ್ಪ ಅಂದ್ರ, ಈಗಾಗಲೆ ಎರಡ ಮೂರ ಸಲ ತಿಳಿಸಿದಂಗೆ ಊರಿಗೆ ಆಪತ್ತ ಬಂದೈತೆ.

ಮಂದಿ :– ಏನೋ, ಎಂತೋ, ಹಿಂಗಾಗಬಾರದಿತ್ತು

ಸಾದಲಿಂಗಗೌಡ :– ಸದ್ದು. ಊರ ಉಳಿಬೇಕು. ಅದು ನಿಮ್ಮ ಕೈಯಾಗೈತೆ.

ಸೊಳ್ಳೆಗೌಡ :– ಹಿಂಗ್ಯಾಕ ಒಗಟನಂಗೆ ಹೇಳ್ತಿ ದೊಡ್ಡಪ್ಪ ಈ ಮಂದಿಗ ತಿಳಿಯಾಣಿಲ್ಲ ಒಸಿ ಬಿಡಿಸಿ ಹೇಳಿಬಿಡು.

ಸಾದಲಿಂಗಗೌಡ :– ಬಿಡಸಹೇಳೋದೇನೈತೆ ಎಲ್ಲಾ ಸ್ಪಷ್ಟವಾಗೈತೆ.

ಚಾಮ :– ಅದೇನಂತ ಹೇಳಬಿಡಿ ಬುದ್ದಿ ನಮ್ಮ ಮಂದಿಗೂವೆ ಆಟು ತಿಳಿಲಿ.

ರಂಗೇಗೌಡ :– ನಿಮಗೆಲ್ಲ ವಿಷಯ ತಿಳಿದಿದ್ದ ಐತೆ. ಊರಾಗ ಏನು ಉಳಿದಿಲ್ಲ ನಾವಿದ್ರ ನಿಪೆಲ್ಲ, ನಮ್ಮ ಕತಿ ಮುಗಿತಂದ್ರ ನೀವು ಮುಗದಂಗೇಯ

ಮಾರ :– ಕೇಳಿದ್ರೆನಪ್ಪಾ ರಂಗಪ್ಪನೋರಮಾತ್ನ. ನಮ್ಮ ಬದುಕಿರೋದೆ ಅವರ

ಕೊಡೊ ಭಿಕ್ಷೆಯ ಮೇಲೆ.

ಚಾಮ :- ನಮ್ಮತಾವ ಏನೈತೆ? ಭೂಮಿ? ದುಡ್ಡು? ಅಧಿಕಾರ? ಊಹೂಂ, ಒಂದರೂಪಾಯಿ ಹೆಂಡಕ ಬೇಕಾರು ಧಣಿಗಳತ್ತ ಹೋಗಿ ಕೈಕಟ್ಟಿ ನಿಲ್ಲಬೇಕು. ಅವರಿಗ ಆಪತ್ತು ಬಂದ್ರೆ ನಮ್ಮನ್ನ ಕಾಪಾಡೋರು ಯಾರು?

ಸರ್ಪ :- (ನಿರ್ಲಿಪ್ತನಾಗಿ) ನಮ್ಮ ಹಟ್ಟಿ ಮಂದಿ ಏನ ಮಾಡಾಕ ಸಾಧ್ಯ ಬುದ್ಧಿ, ಎಲ್ಲಾ ತಿಳಿದವರುತಾವೆ.

ಸಾದಲಿಂಗಗೌಡ :- ಹಂಗಂದ್ರ ಹೆಂಗಲೇ ಸರ್ಪ. ಊರಾಗಬರೋ ಎಲ್ಲಾ ವಿಷಯಕ್ಕೆ ನೀವು ಇರ್ಲೆಬೇಕು. ಒಂದ ತೀರ ಉಳದ್ರು ನೀವ ಬೇಕ. ಹಂಗ ಇದುಕೂಡ.

ಸೊಳ್ಳೆಗೌಡ :- ಆಯ್ತು ಮಾತನ್ನ ಹರಿಬಿಡದಂಗೆ ಈಗ ಏನಾಗ ಬೇಕನ್ನೋದನ್ನ ಸ್ಪಷ್ಟವಾಗಿ ಹೇಳಿ.

ರಂಗೇಗೌಡ :- ಕೇಳ್ರಿಲ್ಲಿ, ಈ ಸುದ್ದಿ ನಾಳೆ ಇಳೆ ಹೊತ್ತಿನ ಮಟಾನು ಯಾರಿಗೂ ತಿಳಿಬಾರದು.

ಚಾಮ :- (ಅವಸರದಿಂದ) ಅಂತಹದ್ದೇನು ಹೇಳಿ ಬುದ್ಧಿ ನಮ್ಮ ತಾಳ್ಮೆಯಾಕೆ ಪರೀಕ್ಷೆ ಮಾಡಿರಿ.

ಸಾದಲಿಂಗೇಗೌಡ :- ನಿಮ್ಮ ಹಟ್ಟಿನಾಗೆ ಹುರಿ ಆಳು ಅಂತಂದ್ರ ಸರ್ಪ ಒಬ್ಬನೆ. ಊರಾನಮಂದಿ ಯಂಕಟರಮಣಭಟ್ಟರತ್ರ ಕೇಳಿ,ನಾಳೆ ನಡಿಯೋ ಪಕ್ಕದ ಊರಿನ ದೇವಿ ಜಾತ್ರೆಯಿಂದ ಹುಲಸ ತರೋದಕ್ಕೆ ಅವನ ನಿಜವಾದ ಶೂರ ಅಂತ ತೀರ್ಮಾನ ಮಾಡವ್ರೆ ನೀವೇನಂತಿರ?

ಮಂದಿ :- (ಒಕ್ಕೊರಲಿಂದ) ಬರೋ ಬರಿ ಐತೆ ಬಿಡಿ, ನೀವು ಅಪ್ಪಣೆ ಕೊಟ್ರ ಆಯ್ತು.

ಸರ್ಪ :- ನಾನ್ಯಾಕೆ ಬುದ್ಧಿ ಇನ್ನೂ ಬೇರೆ ಹುರಿಯಾಳಗಳಾಧರ ಅವರನ್ನ ಕಳಿಸ್ರಿ.

ಸಾದಲಿಂಗಗೌಡ :- ಲೇ ದಡ್ಡ, ಊರಕೆಲ್ಸಕ್ಕೂ ನಿನ್ನ ಆರಿಸಿರೋದು ನಿನ್ನ ಪುಣ್ಯಕಣಲೆ, ನೀ ಸತ್ರ ಊರಾಗ ಮಂದಿ ನೆನಪ ಮಾಡ್ಕೊಂತಾರ. ಇಂತ ಒಬ್ಬ ಶೂರನಿದ್ದಾ ಅಂತೇಳಿ. ಅಲ್ಲಪ್ಪ ನೀ ಏನು ಸಾಮಾನ್ಯದವನ?

C-20

ನಿಮ್ಮ ಮನಿಮುಂದಿನ ಆದಕ್ಕ ಮೀಸಲು ನಿಮ್ಮಪ್ಪನೂವೆ ಅಲ್ಲೆ ಸತ್ತ...

ಸರ್ಪ :- ಈಗ ನಾನು ಅಲ್ಲೆ ಸಾಯಬೇಕು.

ಸೊಳ್ಳೆಗೌಡ :- ಛೇ..ಛೇ. ನೀ ಸಾಯೊ ಮಗನ್ನ ಅಲ್ಲ, ನೀ ಹುಲಸ ತಗೊಂಡು ಆ ಊರಗಡಿ ದಾಟಿ ನಮ್ಮೂರಾಗಡಿಯೊಳಗೆ ಕಾಲಿಡ್ತಿ ಅನ್ನೊ ಅನಂಬಿಕೆ ನನಗೈತೆ.

ರಂಗೇ ಗೌಡ :- ನೀ ಈಗಲೇ ಹಿಂಗ ಹೇಳಿದ್ರ ಹ್ಯಾಂಗಲೇ ಸರ್ಪ ನಿಮ್ಮ ಹಟ್ಟಿಯೊಳಗ ಇರೋ ಧೈರ್ಯಶಾಲಿ ಅಂದ್ರ ನೀ ಒಬ್ಬವ್ನ ತಾಕತ್ತು, ಬಲ, ಛಲ ನಿಂತಾವ ಇರೋದು ಏನಪ.

ಸರ್ಪ :- ಯಾಕೊ ನನಮನಸ್ಥಿತಿ ಸರಿಯಿಲ್ಲ ಬೇರೆ ಯಾರನ್ನಾರು ಆಯ್ಕೆ ಮಾಡ್ಕಳಿ.

ಸಾದಲಿಂಗಗೌಡ :- ಅಪಚಾರ, ಊರಚೌಡವ್ವಗೆ ಅಪಚಾರ ಒಂದ ಸಲ ಊರಪೂಜಾರಿ ಯಂಗಟರಮಣ ಭಟ್ರ ಬಾಯಿಂದ ಬಂದ್ರ ಮುಗೀತು.

ರಂಗೇಗೌಡ :- ಲೇ ಸರ್ಪ ನಾಟಕ ಹಚ್ಚಿ ಏನ ಮಗನ. ಊರಿಗ ಎದರ ಹಾಕ್ಕೊಂತಿ ಏನು.

ತೀಟೆಗೌಡ :- ಗಪ್ಪಾಗ್ರಿ.. ಸರ್ಪನ ಮನಸ್ಸಿನೊಳಗ ಯಾವತ್ತು ಇಲ್ಲದ ಸಂಶಯ ಈಗ ಬರಬೇಕಾರ ಏನೋ ಕಾರಣ ಇರಬೇಕು ಕೇಳ್ರಿ.

ಮಾರ :- ಎಂಥ ಸಂಶಯ ಬುದ್ಧಿ ನಾವು ಬದುಕಿದ್ರು ಒಂದೇ ಸತ್ತರು ಒಂದೇ, ನಮಗೇನ ಆಸ್ತಿತ್ವ ಐತೆ.

ಚಾಮ :- ಎಯ್, ಸರ್ಪ, ದೈವದ ಮುಂದ ನಾವೇಟ್ರವರು. ಒಪ್ಕೊಳೊ.

ಸಣ್ಣಗೌಡ :- ಲೇ ಮಾರ, ಚಾಮ ನಿವ್ಯಾಕ ಅವನ ಹಿಂದೆ ಬಿದ್ದಿರ. ಅಂವ ನಾಳೆ ಬೆಳಕ ಹರದ್ರ ನಮ್ಮೂರಿಗೆ ಹುಲಸು ತರ್ತಾನ. ಅಲ್ರಪ್ಪ ಆ ಊರಾಗ ಚರಗ ಚೆಲ್ಲೊದನ್ನ ಹಿಡಿದು ಒಂದೇ ಉಸುರಿಗೆ ಊರಾಗೆಲ್ಲ ಸಾರಿ ಆ ಊರ ಗಡಿದಾಟೊ ತಾಕತ್ತಿರೋದು ಸರ್ಪನ ಮನಿಯವರಿಗ ಮಾತ್ರವೆ ಇದು ದೈವಕೊಟ್ಟ ಶಕ್ತಿ ಅವರಿಗೆ.

ತೀಟೆಗೌಡ :- ನಮ್ಮ ಕೇರಿಯೊಳಗ ಅಂತ ಗಂಡು ಹುಟ್ಟೆಯಿಲ್ಲ ಬಿಡು. ಚೆರಗ ಚೆಲ್ಲೋರು ಗಂಡಗುದ್ಲಿ ಹಿಡ್ಕಂಡಿರೋದನ ಕಂಡೆ ಉಚ್ಚೆ ಹೊಕೊಂತವೆ.

ಸೊಳ್ಳೆಗೌಡ :- ಲೇ ಏನಂದ್ಕೊಂಡಿರ ಹಟ್ಟಿ ಮಂದಿ ಹುಟ್ಟುತ್ತಲೆ ಧೈರ್ಯವಂತರಾಗೆ ಹುಟ್ತಾರ. ಈಗ ನಮ್ಮ ಸರ್ಪನ್ನ ನೋಡ್ರಪ್ಪ. ನಾ ಹೇಳಿದ ಮಾತನ್ನ ಯಾವತ್ತಾರು ತಪ್ಪಿದ್ದಾನ ಇಲ್ಲ. ಎಂಥಾ ಶೂರನ ಎದಿ ಮೇಲಿನ ಅಂಗಿಯನ್ನು ಹಿಡಿದು ನಿಲ್ಲಿಸಿರೂ ಭೂಪ ಅವನು ಈಗ ಹಿಂಗೆಲ್ಲಾ ಹಿಂದೇಟು ಹಾಕೋದಿಲ್ಲಾ. ನಾಳೆ ಹುಲಸು ತಂದೆ ತರ್ತಾನ.

* * *

ಸನ್ನಿವೇಶ–೩

(ಸರ್ಪ ಸಂದಿಗ್ದದಲ್ಲದ್ದಾನೆ. ಊರ ಒತ್ತಾಯಕ್ಕೆ ಮಣಿದು ಹುಲಸು ತರಲು ಬೆಳಗ್ಗೆ ಐದು ಗಂಟೆಗೆ ಹೊತ್ತಾರ ಜೀವದ ಹಂಗನ್ನು ತೊರೆದು ಹೋರಾಡಬೇಕು)

ಸಂಕಜ್ಜಿ :- ಊರವರ ಸಂಚಿಗೆ ಬಲಿಯಾಗೋದು ನಾವು. ನಾಳೆ ನೀ ಏನಾರ....

ಸರ್ಪ :- ಹಂಗ್ಯಾಕೆ ಅನುಮಾನಪಡ್ತಿಯಾ, ನನ್ನ ತಾಕತ್ತು ನಿನಗ ಗೊತ್ತಿಲ್ವಾ

ಸಂಕಜ್ಜಿ :- ನಿಮ್ಮಪ್ಪನು ಹಂಗೆ ಅಂದು ಹೋಗಿದ್ದ ಆದ್ರೆ......

ಸರ್ಪ :- ಇದು ನಮ್ಮ ಮನಿಗ ಅಂಟಿರೂ ಶಾಪ. ದೊಡ್ಡ ಜಾತಿ ಮಂದಿ ಆಡೊ ಆಟಕ ದಾಳಗಳು ಆಗೋದು ನಾವೆ. ನಮಗೆ ಯಾವ ಸ್ವಾತಂತ್ರವೂ ಇಲ್ಲ. ತಲಿದಂಡಕೊಡಾಕ ಬೇಕು. ಏ, ದೇವರೆ ಯಾಕಿಂಗೆ? ನಾವ ಮಾಡದ ತಪ್ಪಿಗೆ ನಮಗೇಕೆ ಶಿಕ್ಷೆ.

ಸಂಕಜ್ಜಿ :- ಸಮಾಧಾನ ಮಾಡ್ಕಮಗ ಇನ್ನೇನು ಎಲ್ಲಾ ಮುಗದ ಹೊತು ನಿನ್ನ ಹಣಿ ಬರ ಗಟ್ಟಿಯಾಗಿದ್ದು ವಾಪಾಸ ಬಂದಿಯೆ ಇಲ್ಲಾಂದ್ರೆ...

ಸರ್ಪ :- ಈ ಬಡವರಿಗೆ ಬದಕೊ ಹಕ್ಕಿಲ್ಲವ್ವ ಈ ಭೂಮಿಮ್ಯಾಲೆ. ಒತ್ತಾಯದಿಂದ ನೀನು ಸಾಯಿ ಅಂದ್ರ ನಾವು ಸಾಯಲು ಸಿದ್ದರಾಗಬೇಕು. ನಮಗೂ ಕುರಿಗಳಿಗೂ ವ್ಯತ್ಯಾಸವೇ ಇಲ್ಲ.

ಸಂಕಜ್ಜಿ :- ನಾವು ಹುಟ್ಟಿರೋದೆ ಅವಮಾನ ಸಹಿಸಿಕೊಂಡು ಬದಕೋದಕ್ಕೆ ಬಡತನ, ದಾರಿದ್ರ್ಯದೊಳಗೆ ಬದುಕಬೇಕು, ನಾವು ಶ್ರೀಮಂತರಾಗಂಗಿಲ್ಲ ಯಾಕಂದ್ರ

C-13

ನಮ್ಮ ರಟ್ಟೆಯೊಳಗ ಶಕ್ತಿ ಐತೆ, ತಲಿಯೊಳಗ ಮೆದುಳಿಲ್ಲ. ನಮ್ಮ ಮಂದಿಗ ಹೆಂಡ ಕುಡುಸಿದರ ಏನಬೇಕಾರು ಹೇಳ್ತಾರ, ಏನುಬೇಕಾದ್ರು, ಮಾಡಾಕ ಸಿದ್ದರಾಗ್ತಾರೆ.

ಸರ್ಪ :- ಎಲ್ಲಿವರಿಗೆ ಹಂಗ ನಡದೀತು? ನಮ್ಮ ಈ ಗುಲಾಮಗಿರಿಯನ್ನು ಕೊನೆಗಾಣಿಸೋದಕ್ಕ ಯಾರಾರು ಬರಬಾರದೆ. ಆಗ ನಾವು ಸ್ವತಂತ್ರಹಕ್ಕಿಹಂಗೆ ಆಕಾಶದೊಳಗೆ ಹಾರಡಬಹುದು.

ಸಂಕಜ್ಜಿ :- ಇನ್ನೇನು ಯೋಚನೆ ಮಾಡಿಮಗ. ದೊಡ್ಡ ಗೌಡ್ರ ಮನಿಯಿಂದ ಪೂಜಿಗೆ ಎಡೆಬರುತ್ತೆ, ಅಲ್ಲಿಗ ಮುಗಿತು.

ಆಗ, ಚಾಮ, ಮಾರ ಬಂದೇ ಬಿಟ್ರು.

(ಹಲಿಗೆ ಸದ್ದು ಮಾಡುತ್ತ ಕೆಕೆ ಹಾಕುತ್ತ. ಭಂಡಾರ, ಕುಂಕುಮ ಎರಚಾಡುತ್ತ ಮುಂದೆ ಮುಂದೆ ಮಾರ, ಚಾಮ, ದುರ್ಗ, ಹಿಂದ ಮೀಸೆಯಲ್ಲೆ ನಗುತ್ತ ಸೊಳ್ಳೆಗೌಡ, ತೀಟೆಗೌಡ).

ಸೊಳ್ಳೆಗೌಡ :- ಮುಗಿತ ನೋಡಲೆ ಈ ಮಗನದು. ನನ್ನ ಹೆಣ್ತಿಮೇಲೆ ಕಣ್ಣಿಡ್ತಾನಂದ್ರ ಎಷ್ಟೂ ಗುಂಡಿಗೆ ಇರಬೇಕು.

ಏಯ್, ಸರಿಗ ಹಚ್ಚಲೇ

(ನಾಲ್ಕು ಜನ ಅವನ ಮ್ಯಾಲ ಅರಿಶಿಣಾ ಕುಂಕುಮ ಬಳಿದು ಕುಂತಹತ್ರದಿಂದಲೇ ಎತ್ಕೊಂಡ್ರು)

ಸಂಕಜ್ಜಿ :- ಬಿಡ್ರೋ ನನಮಗನ್ನ... ಬಟ್ಟೆ ಬಿಡ್ರೋಯಪ್ಪ, ಸರ್ಪ.... ಏನಪಾಪ ಮಾಡಿದ್ಯೋ ಮಗನ. ಸುಕಾಸುಮ್ಮನೆ ಸಾಕಿ ದುಷ್ಟರ ಕೈಯಾಗ ಕೊಟ್ನಲ್ಲೋ ಮಗನೆ. ಏನಮಾಡ್ಲವ್ವ, ಯಾರನ್ನ ಕರಿಲಿ, ಯಾರಿಗ ಹೇಳ್ಲಿ....

ಏಯ್, ದುಷ್ಟಸೂಳಿಮಕ್ಕಳ್ರ ನನ್ನ ಮಗನ ಪ್ರಾಣ ತಗಿಯಾಕ ಅವನಿಂದೆ ಯಾಕ ಬಿದ್ದಿರೋ.

ಸೊಳ್ಳೆಗೌಡ :- ಏಯ್, ಮುದಿಗೂಬೆ, ಇದೇನು ಹೊಸದೇನು ಈ ಹಟ್ಟಿಯೊಳಗ. ಈ ಹಟ್ಟಿಯವಾಗಿರೊ ಪ್ರತಿಯೊಬ್ಬ ಗಂಡಸರನ್ನ ಚೌಡವ್ವಗ ಬಲಿಕೊಡೋವ ಹಿಂಗೇಯಾ. ಯಾಕಂದಿ, ಈ ಮಕ್ಕಳಿಗ ತಿಂದು

ಕೊಬ್ಬ ಬಂದ್ಯೆತೆ ನಮ್ಮ ಹೆಂಗಸರ ಮೇಲೆ ಕಣ್ಣಾಕ್ತಾರ...ಕಣ್ಣು. (ನಗುವನು) ಈಗ ನೋಡು...

ಸಂಕಜ್ಜಿ :- ಎಯ್, ಗೌಡ. ನೀನು ನಾಮರ್ದಕಣ್ಲೆ, ನನಮಗ ಗಂಡಸು ಅದಕ್ಕೆ ಇಡಿ ಊರಂಪ ಊರೆ ಅವನನ್ನ ಹುಲುಸು ತರೋದಕ ಆರ್‍ಸಿರೋದು ನಿಮ್ಮಟ್ಟಿಯೊಳಗ ಯಾ ಗಂಡ್ಸದಾನು? ಕೈಲಾಗದವರು. ನಮ್ಮ ಹಟ್ಟಿ ಹೆಂಗಸರ್‍ಂದ ಸುತ್ತಾಡಿ, ಸೊಂಟದೊಳಗ ಕಸು ಇಲ್ಲಿಕ್ರು ಗಂಡಸು ಅಂತ ತೋರಿಸೂ ನಾಟಕ ಆಡಿ, ಮನಿಯೊಳಗಿರೂ ಹೆಣ್ತಿಗ ಮೋಸಮಾಡ್ತಿಯಲ್ಲ, ಹಂಗ ಅಂದ್ಕೊಂಡಿಯೇನಲೇ. ಹೋಗಿ ನಿನ್ನ ಹೆಣ್ತಿನ ಕೇಳು ನನಮಗನ ಪೌರುಷ.

ತೀಟೆಗೌಡ:- ಏಯ್, ಬೇವರ್ಸಿ, ನಮ್ಮ ಗೌಡ್ರ ವಂಶನ ಹೀಯಾಳಿಸ್ತಿ ಏನೆ, ಎಯ್, ತಾರಲೆ ಗಂಡ ಗುದ್ಲಿ. ಮದ್ಲು ಇಲ್ಲೇ ಚೆಂಡ ತಗಿಯಾನ.

ಮಾರ :- ಗೌಡ್ರ, ಯಾಕ ಆಗ್ತಿರೋದಕ್ಕ ವಿಗ್ನ ಮಾಡಾಕ ಹತ್ತಿರಿ. ಅಕಿ ಮಗನಿಗ ಗೊತ್ತಾದ್ರ ಅಕಿಚೆಂಡಲ್ಲ ನಿಮ್ಮಿಬ್ಬರ ಚೆಂಡತಗಿತಾನ. ಅವನು ಹುಲಿ ನಿಮ್ಮಂತೋರನ್ನ ಹಂಗಬಗದ ಬಿಟ್ಟಾನು ಸುಮ್ನ ನಡೆರಿ.

* * *

C-15

ಸನ್ನಿವೇಶ-೪

ಮಾರ :- ಎನ್ರಲೇ ಇದು ಈ ಗಡಿತಾವ ನಮ್ಮ ಪ್ರಾಣನ ಕೈಯಾಗ ಹಿಡ್ಕಂಡು ಸರ್ಪ ಬರೋ ಮಟಕಾಯಬೇಕು ಯಾರಾದರು ಆ ಊರ್ನೋರು ನಮ್ಮನ ನೋಡಿದ್ರ ಅವನ್ನ ಬಿಟ್ಟು ನಮ್ಮನ್ನ ತುಂಡ ಮಾಡ್ತಾರ ಹಾಳಾದ ಜನ್ಮ ಈ ಕೆಳಜಾತಿಯೋರ ಹಟ್ಟಿಯೊಳಗ ಹುಟ್ಟಿ ಬರಿ ಅವಮಾನ, ಬಡತನ, ಗೌಡ ನಮ್ಮಜ್ಜಿ ಕಾಯೋದ ಆತು. ಪಾಪ ಸರ್ಪ ಒಂದ ಗಳಿಗಿ ಹೆಚ್ಚು ಕಮ್ಮಿಯಾತಂದ್ರ ಸಾವುದಿಟ.

ಚಾಮ :- ಹುಟ್ಟಿದ ಮಗನ ಮಾರಿನೋಡಾಕು ಬಿಡ್ಲಿಲ್ಲಾ ಈ ಕ್ರೂರಿ ಮೇಲ್ಜಾತಿ ಮಂದಿ. ಲೇ ಮಾರ ನೀ ಏನೇ ಹೇಳು ಅವರೆಲ್ಲಾ ಒಂದೇ ಕಣಲೇ ಆದ್ರೂ ಸರ್ಪಗಂಡಮಗ, ಅವರ ಬಣಿಯೊಳಗ ನುಗ್ಗಿ ಸೊಳ್ಳೆಗೌಡ ಹೆಣ್ತಿ ಕೂಡ.

ಮಾರ :- ಆ ಮಗ ಮಾಡಿದ ಹರ್ಕತಿಗ ಇವತ್ತು ಅವನ ಪ್ರಾಣಕ್ಕ ಸಂಚಕಾರ ಬಂದಿರೋದು. ಈ ಮೇಲ್ಜಾತಿಯವರು ಬೀಜದ ಕ್ವಾಣ ಇದ್ದಂಗ, ತಾವು ಏರಂಗಿಲ್ಲ ಏರೋ ಬ್ಯಾರೆ ಕ್ವಾಣಗಳಿಗೂ ಬಿಡಂಗಿಲ್ಲ. ಆದ್ರು ಸೂಳಿಮಕ್ಕಳಿಗ ನಮ್ಮ ಹೆಂಗಸರು ಅಂದ್ರ ಪುಗಸಟ್ಟೆ ಸಿಕ್ಕಿರೊಹಂಗೆ ಅವರಿಗಾಗಿಯೆ ಇರೊ ಹಂಗ ವರ್ತನೆ ಮಾಡ್ತರ ಅದೇ ನಮ್ಮೋರು ಯಾರು ಅವರ ಮಾರಿ ನೋಡಂಗಿಲ್ಲ.

ದುರ್ಗ :- ಏನೇನು ಸದ್ದಿಲ್ಲ ಗದ್ದಲಯಿಲ್ಲಪ್ಪ. ಅಲ್ಲಾ ಅಂವ ಹುಲಸ ತಂದಾನಂತಿಯ ಮಾರಣ್ಣ.

ಮಾರ :- ಹೆಂಗ ಹೇಳಲೇ ಹುಡ್ಗಿ. ಅಲ್ಲಿ ಚೆರಗ ಚೆಲ್ಲೊ ಮಂದಿನೂ ನಮ್ಮಷ್ಟರೆ, ಆದ್ರ ಅವರಿಗ ಇಂವ ನಮ್ಮಂದಿಯೋನಪ್ಪ ಬಿಟ್ಟ ಬಿಡಬೇಕು ಅಂತ ಕುರುಣೆ ಇದ್ದಂಗಿಲ್ಲ. ಅವರು ದೊಡ್ಡ ಜಾತಿ ಶ್ರೀಮಂತರ ಅಡಿಯಾಳಾಗಿ, ಅವರು ಹೇಳಿದ್ದನ್ನ ಪಾಲಿಸೊ ಸೇವಕರು.

ದುರ್ಗ :- ಹಂಗಾರ ಇವನಕತಿ ಮುಗದಂಗೇಠಯ ಬಿಡು. ನಾನು ಕೇಳಿನೆ ಆ ಊರಾಗ ಚೆನ್ನ, ಪಕ್ಕೀರ, ಹನ್ಮಂತ ಅನ್ನೋ ಬಲಿಶಾಲಿಗಳಧರಂತ. ಒಡೊ ಮಿಕಾನ ಬೆನ್ನಟ್ಟಿ ಹಿಡಿತಾರಂತ. ಇವನ್ಯಾವ ಮೂಲಿ.

ಚಾಮ :- ಅಂವ ಅಲ್ಲೆಸಿಕ್ಕ ,ನಾವ ಬಚಾವ ಕಣ್ಲೆ, ಅವನೇನಾರು ಗಡಿ ಹತ್ರ ದಾಟೋ ಮುಂದೆ ಸಿಕ್ಕ್ರ ನಮ್ಮ ಪ್ರಾಣ ಹೋದಂಗೆ.

ಮಾರ :- ನಮ್ಮ ಜಾತಿಯವರನ್ನ ಆ ಚೂಡವ್ವನೆ ಕಾಪಾಡಬೇಕು ಕಣ್ರಲಾ, ಯಾಕಂತಿ, ನಮ್ಮ ಮಂದಿಯುನ್ನ ಹೊಡಿಯೋಕು, ನಾವು, ಕೊಲ್ಲೋರುನಾವ. ಆದ್ರ ಈ ಕೆಲಸ ಮಾಡಿಸೋದು ಮೇಲಿನಿ ಜಾತಿಯವರು. ಈಗ ಏನಾಗ್ಯೆತಪ್ಪ ಅಂದ್ರ, ಸರ್ಪನ ವಿರುದ್ಧ ಎಲ್ಲಾ ಸಂಚಗಳು ನಡದಾವ. ಅಂವ ಬದಕುಳಿಯೋದ ಸಾಧ್ಯನಯಿಲ್ಲ, ಸುದ್ದಿ ತಿಳಿತಂದ್ರ ನಾವು ಓಡಾಕ ಸಿದ್ಧರಾಗಿರಬೇಕು ಆಟೇಯ.

ದುರ್ಗ :- ಅಂದ್ರ ನಿಂಗೆಲ್ಲಾ ಗೊತ್ತು ಅನ್ನು. ಥೆ, ನಮ್ದು ಒಂದು ಜನ್ಮಾನ. ನಮ್ಮ ಅಣ್ಣ ತಮ್ಮಂದಿರ ವಿರುದ್ಧನೆ ನಾವು ಸಾವಾಗಿ ನಿಲ್ತಿವಲ್ಲಾ, ಏನ ಹಣೆಬರ ಅಂತೀನಿ.

* * *

ದೃಶ್ಯ–೫
ಸನ್ನಿವೇಶ–೧

ಆಕೃತಿ :- ಆ ಕಡೀಗ ಮಂದಿ ತಮ್ಮ ಅಸಾಹಯ ಕತೆಗೆ ಹಳಹಳಿಸುತ್ತಿದ್ದಾರೆ. ಈ ಕಡೀಗ ಇಂತಹದೊಂದು ಸನ್ನಿವೇಶ ಬರುತ್ತದೆ ಅಂತೇಳಿ ಕುಡಿದು ಧ್ಯೆ ಅಂತಿರೊ ಅವನದೆ ಜಾತಿಯವರು ಗಂಡಗುದ್ಲಿ, ಮಚ್ಚು ಹಿಡ್ಕಂಡು ಬಲಿತಗೊಳಾಕ ಸಜ್ಜಾಗಿ ನಿಂತವರೆ. ಈ ಜಗತ್ತಿನ ಯಾವ ಮೂಲೆಯಲ್ಲಾದರು ಉಳ್ಳವರ ಸಂಚಿಗೆ ಬಲಿಯಾಗುವವರೆ ಬಡವರು. ಈ ಬಡವರೂ ಕೂಡ ಈ ಸತ್ಯವನ್ನು ಅರ್ಥಮಾಡಿಕೊಂಡವರಂತೆ ಶೋಷಣೆಗೊಳ ಪಡುತ್ತಲೆ ಇದ್ದಾರೆ. ಅಯ್ಯೋ ಹುಟ್ಟಿದ್ದೆ ಸಾಯೋದಕ್ಕೆ ಅನ್ನೋದನ್ನ ಬಲವಾಗಿ ನಂಬಿಕೊಂಡಿದ್ದಾರೆ. ನಮ್ಮ ನಾಯಕನ ಗತಿ ಏನಾಗಬಹುದು?

ಒಬ್ಬ :- ಕೋಣ ಕಡದಾರ. ಈಗ ಚರಗತಗೊಂಡು ಮಂದಿ ಹೊಂಡತಾರಪ್ಪೋ. (ಹಲಿಗೆ ಬಾರಿಸುವನು)

ಮತ್ತೊಬ್ಬ :- ಹುಲಿಗ್ಯೊ, ಹುಲಿಗ್ಯೊ.....

ಗುಂಪು :- ಆ ಕಡಿ, ಈ ಕಡಿಗ ಸರಿಗ ನೋಡ್ತಲೆ, ಯಾರಾದ್ರು ಒಂದ ನರಪಿಳ್ಳೆ ಕಂಡ್ರು ರುಂಡ ಚೆಂಡಾಡ್ರಿ.

ಮತ್ತೊಬ್ಬ :- ಹುಲಗ್ಯೊ.... ಹುಲಗ್ಯೋ
(ಗುಂಪು ಕೇಕೇ ಹಾಕುವುದು)

ಸರ್ಪ :- ಇಷ್ಟ ಮಂದಿ ನಡುವಿಂದ ಹುಲಸ ತಗೊಂಡು ಹೋಗಾಕ ಆದೀತ, ನಾನು ಕಂಡ ತಕ್ಷಣವೇ ಕೋಲ್ಲಾಕ ಸಜ್ಜಾಗಿರೊ ಹಾಗಿದೆ...
ಹೂಂ , ನಾವು ಬದುಕಿರೋದೆ ಬೇರೊಬ್ಬರ ಸಲುವಾಗಿ, ಸತ್ತರೆ ವಂಶನಾ ಬೆಳಗೊಕೆ ಒಬ್ಬಮಗ ಅದಾನ. ಬದುಕಿದ್ರ ಮುಂದ ನೋಡಿದ್ರಾತು.

ಮತ್ತೊಬ್ಬ :- ಹುಲಗ್ಯೋ......

ಸರ್ಪ :- (ಚೆರಗದ ಒಂದಿಷ್ಟು ಅಗಳನ್ನು ಕೈಯಲ್ಲಿ ಹಿಡಿದವನೆ) ಹುಲಸಗೊಂಡು ಹಕ್ಕಿನ್ರಪ್ಪೋ..... (ಓಡುವನು)

ಒಬ್ಬ :- ಎಯ್, ನಮ್ಮ ಪಕ್ಕದ ಸೋಮಾಪುರದವನು ಹುಲಸಗೊಂಡ ಓಡಿದ... ಒಡ್ರಲೇ ಬೆನ್ನಹತ್ರಿ.

ಸರ್ಪ :- ಈ ಊರಿನ ಹುಲಸನ್ನ ಒಯ್ಯಾಕ ಹತ್ತಿನ್ರಪ್ಪೋ...

ಗುಂಪು :- (ಕೇಕೆ ಹಾಕಿ) ಹಿಡಿರಲೆ ಗಡಿದಾಟೋದರೊಳಗೆ ಬಿಡಬಾರದು ಕೊಂದಹಾಕ್ರಿ ಸೂಳಿಮಗನ್ನ.

ವರದೇಗೌಡ :- ಒಡ್ರಲೇ ಹಿಡಿರಿ ಆ ಮಗನ್ನ. ಊರ ಮಂದಿ ಕೂಳಹಾಕಿ ಸಾಕಿರೋದ ಯಾಕ ನಿಮಗ ಓಡ್ರಿ ಬಿಡಬಾರದು.

ಒಬ್ಬ :- ಬುದ್ಧಿ ಅಂವ ಒಡ್ತಿರೋದ ನೋಡಿದ್ರ ನಮ್ಮೊರು ಅವನ್ನ ಮುಟ್ಟಾಕು ಆಗಾಕಿಲ್ಲಾ

ವರದೇಗೌಡ :- ಲೇ ಬೇವರ್ಸಿ ನಿಮ್ಮ ಮಂದಿಗ ತಿಂಗಳ ಮುಂಚಿಂದುವೆ ಬಾಡಹಾಕಿ, ಹೇಂಡಕುಡಿಸಿ ಸಾಕಿದ್ಯಾಕಿ. ಆ ಮಗ ತಪ್ಪಿಸಿಕೊಂಡು ಹೋಗಬಾರ ದಂತ.

ಒಬ್ಬ :- ನೀವೇನ ಹೇಳ್ರಿ ಅಂವ ಗಡಿ ದಾಟಿ ಬಿಡ್ತಾನ.

ಇನ್ನೊಬ್ಬ :- ಸುತ್ತಾಕ್ರಷೇ ಬಿಡಬೇಡ್ರಿ ಹೂಂ....

ಮತ್ತೆಬ್ಬ :- ಬೀಸಲೇ ಗಂಡ ಗುದ್ಲಿ...

ಒಬ್ಬ :- ಹೂಂ.... ಅರೇ ಸ್ವಲ್ಪದ್ರಲ್ಲೇ ತಪ್ಪಿಸಿಕೊಂಡ ಓಡ್ರೋ, ಅಂವ ದಾಟಿದ್ರ ನಮ್ಮೂರಮಂದಿ ನಮ್ಮನ ಕೊಲ್ತಾರ...

ಮತ್ತೊಬ್ಬ :- ಬಿಡಬ್ಯಾಡ್ರಲೇ ಗಿಡ ಇನ್ನೇನ ದೂರ ಇಲ್ಲಾ ಅವನೇನಾರು ಚರಗ ತಗೊಂಡು ಆಕಡಿಗ ಎಸದರೂ ಕತಿಮುಗಿತು.

C-24

ಇನ್ನೊಬ್ಬ :- ಚರಗ ಆ ಕಡೆಗೆ ಹೊಗಾಕಮದ್ಲು ಅವನ ಚೆರಗ ಚೆಲ್ಲಲಿಲ್ಲಾ ನಮ್ಮಪ್ಪನ ಮಗನೆ ಅಲ್ಲಾ ಅಡ್ಡ ಒರುವನು.

ಒಬ್ಬ :- ಶಬ್ಬಾಸ್, ಹೂಂ ಓಡಲೇ ಓಡು.

ಇನ್ನೊಬ್ಬ :- ಹಾಂ, ಹಿಂದೆ ಓಡು, ನಾ ಮುಂದಿಂದ ಬರ್ತಿನಿ.

ಮತ್ತೊಬ್ಬ :- ಸುತ್ತವರಿರಿ

ಇನ್ನೊಬ್ಬ :- ಹೂಂ.... ಏಯ್....

ಸರ್ಪ :- ಅಯ್ಯಾ ಸತ್ತೆ....

ಗುಂಪು :- ಉಧೊ ಉಧೋ.....

ಒಬ್ಬ :- ನಮ್ಮ ಹುಲಸ ತಗೊಳಾಕ ಬಂದಿದ್ಯ ಮಗನ
(ಕೈ ಕತ್ತರಿಸುವನು)

ಇನ್ನೊಬ್ಬ :- ನಮ್ಮೂರಾಗ ಗಂಡಸರೆ ಇಲ್ಲಂದ್ಕೊಂಡಿದ್ದ
(ಕಾಲುಕತ್ತರಿಸುವನು)

ಮತ್ತೊಬ್ಬ :- ಸಾಕಮಾಡ್ರಿ, ಅವನ ರುಂಡನೆ ಚೆಂಡಾಡಿವಿ ಹೋಗಿ ವರದೆ ಗೌಡ್ರಿಗೆ ಸುದ್ದಿ ತಿಳಿಸ್ರಿ

* * *

ಸನ್ನಿವೇಶ–೨

ಸೊಳ್ಳೆಗೌಡ :– ಅಂತು ನನಪಾಲಿನ ಒಂದ ಮುಳ್ಳು ಇಲ್ಲದಂಗಾಯ್ತು ಆದ್ರ....

ಶರ್ಮಿಳೆ :– ಆ ಮುಳ್ಳು ನನ್ನ ಗರ್ಭದೊಳಗೆ ಬೀಜ ಬಿತ್ತಿದೆ, ಅದನ್ನ ತಗೊಂಡು ನಾ ಹೆಂಗ ಆಟ ಆಡಿಸ್ತಿನಿ ನೋಡು.

ಸೊಳ್ಳೆಗೌಡ :– ನೀನು ಜೀವಂತವಾಗಿ ಉಳಿದ್ರೆ ತಾನೆ....

ಶರ್ಮಿಳೆ :– ಅಮಾಯಕ ಜನರನ್ನ ಕೊಂದಹಾಗಲ್ಲ, ನಾನು ಗೌಡ್ರವಳೆ. ನಿನಗಿಂತಲು ಆಲೋಚನೆಯೊಳಗ ಒಂದ ಪಾಲು ಮೇಲು. ನೀ ಏನು ಮಾಡಾಕ ಆಗೋದಿಲ್ಲ.

ಸೊಳ್ಳೆಗೌಡ :– ಎಯ್, ನನ್ನ ಸರಿಸಮ ನಿಂತ ಮಾತಾಡ ಬ್ಯಾಡ.... ನನಗಿಂತ ಜಾಸ್ತಿ ಆಲೋಚನೆ ಮಾಡೋಳು, ನಿನ್ನ ಗೆಣಕ್ಕಾರನನ್ನ ಯಾಕೆ ಉಳಿಸಿಕೊಳ್ಳಲಿಲ್ಲ ಹೇಳೆ ಬಿಕನಾಸಿ, ಹೇಳು.

ಶರ್ಮೀಳೆ :– ಪ್ರವಾಹದ ವಿರುದ್ಧ ಈಜೋದು ಮುರ್ಖತನ ಅನ್ನೋ ಸತ್ಯ ನನಗ ಗೊತ್ತು. ನೀನು ನಿನ್ನ ಜಾತಿಯ ಎಲ್ಲಾ ಗೌಡರು ಮಾಡಿದ ಒಳಸಂಚು,

(ನಗುವಳು)

ಸೊಳ್ಳೆಗೌಡ :– ನಿನ್ನ ಪ್ರಾಣಕ್ಕೂ ಒಂದು ಒಳಸಂಚು ರೂಪಿಸಿದ್ದಿವಿ. ಅದರಿಂದ ಹೆಂಗೆ ತಪ್ಪಿಸಿಕೊಳ್ತಿಯಾ ನಾನು ನೋಡೆ ಬಿಡ್ತಿನಿ. ಯಾರಲ್ಲಿ.... ಲೇ ಮಾರ, ದುರ್ಗಾ ಹೂಂ....

C–12

ಶರ್ಮಿಳೆ :- (ನಗುತ್ತ) ಹೂಂ...

ಸೊಳ್ಳೆಗೌಡ :- ಲೇ ಕತ್ಲಾಗ ನನ್ನ ಹಿಡಿತಿದ್ದಿರಲ್ರಲೇ ಅಕೀನ ಹಿಡಿರಿ.

ಶರ್ಮಿಳೆ :- (ನಗುವಳು) ಯಾರ ಯಾರನ್ನ ಹಿಡಿತಾರ ಯಾರು ಯಾರಿಗ ಬಲಿಯಾಗ್ತಾರ ಈಗ ಗೊತ್ತಾಗತೈತಿ ನಾನು ಹೆಣ್ಣು ಜೇಡ. ನಿನಗ ಬೀಸಿದ ಬಲೆಯೊಳಗೆ ಸರಿಯಾಗೆ ಸಿಗಾಕೊಂಡಿಯೇ....

ಸೊಳ್ಳೆಗೌಡ :- ಬಿಡ್ರಲೇ.... ಬಿಡ್ರೋ....
ಅವ್ವ.... ಸತ್ತೆ.....

ಶರ್ಮಿಳೆ :- ಬಡವರ ಜೀವಕ ಬೆಲೆನೆ ಇಲ್ಲಾಂತ ತಿಳ್ಕೊಂಡಿರೋ ನಿನ್ನಂತೋರು ಬದಕಬಾರ್ದು. ನೋಡು ನಿಮ್ಮವ್ವ, ಅಪ್ಪಗ ಕೂಡ ಸುದ್ದಿ ತಿಳಿದಂಗ ನೀನು ಸತ್ತಹ್ವಾದೆ. ಈಗ ನನ್ನ ನಾಟಕ ನೋಡು ಅಯ್ಯೋ, ಏನಂದ್ರೆ. ಯಾರದ್ರು ಬರ್ರಪ್ಪ ನನಗಂಡ ನೇಣಹಾಕ್ಕೊಂಡವ್ನೆ..

* * *

C-4

ಸನ್ನಿವೇಶ–೩

ರಂಗೇಗೌಡ :– ಲೇ ಸಣ್ಣಗೌಡ, ಸುದ್ಧಿ ತಿಳಿತೇನಲಾ ಸೊಳ್ಳೆ ಗೌಡಂದು....

ಸಣ್ಣ ಗೌಡ :– ಅಲ್ಲಲೇ ರಂಗ ನೀನು ಬೋ ಬೆರ್ಕಿ ನನ ಮಗ ಕಣಲೇ ಅಲ್ಲಾ ಗೌಡ್ಕಿ ಸಂಬಂಧ ನಿನ್ನ ಶತ್ರುಗಳನ್ನೆಲ್ಲಾ ಬೇಟೆ ಆಡಿದೆ.

ರಂಗೇಗೌಡ :– ಹೂಂ, ಅದೇ ಕಣಲೇ ಅಧಿಕಾರ. ನಮ್ಮಪ್ಪನ ಅಧಿಕಾರದ ಕಸ್ಕೊಂಡಿದ್ದ ಸೊಳ್ಳೆಗೌಡನ ಅಪ್ಪ. ಈಗ ನೋಡು ಮುದಿವಯಸ್ಸಿನೊಳಗ, ಅಯ್ಯೋ ಅನ್ನೊರಿಲ್ಲದಂಗೆ ಹ್ಯಾಂಗ ಮೂಲೆಗುಂಪಾದ.

ಸಣ್ಣಗೌಡ :– ಅಲ್ಲಾ ಮೂರನೇ ಹಕ್ಕಿ ತಲಿದಂಡ ಕೊಡ್ಲೆಯಿಲ್ಲ ಎರಡತಲಗಳೇನೊ ಉರುಳಿದವು.

ರಂಗೇಗೌಡ :– ಅದ್ರಲ್ಲೇ ಕಣಲೆ ಮಜ ಇರೋದು. ಇದು ಒಳ ಒಪ್ಪಂದ ಏನಪ್ಪ. ಅಕೀನ ಬಂದು ನಿನ್ನ ಗುಲಾಮಳಾಗಿರ್ತಿನಿ ಅಂದ್ಲು

ಸಣ್ಣಗೌಡ :– ಆ ಮೇಲೆ....

ರಂಗೇಗೌಡ :– ನಿನ್ನ ಹಾದಿಯಲ್ಲಿರೊ ಮುಳ್ಳು ಸೊಳ್ಳೆಗೌಡ ಅವನ್ನ...

ಸಣ್ಣಗೌಡ :– ಸರಿಸಿಬಿಟ್ಟೆ.... ಈಗ ನೀನ ಗೌಡ ಆದ್ರ...
ಅವಳಿಗ ಆರುತಿಂಗಳ ಗರ್ಬಿಣಿ. ನಾಳೆ ಅವಳಿಗ ಗಂಡ ಮಗು ಆದ್ರ ನಿನಗ ಕಷ್ಟ....

ರಂಗೇಗೌಡ :– ಲೇ ಆಗರ್ಭ ಸರ್ಪಂದು.

ಸಣ್ಣಗೌಡ	:-	ಸರ್ಪನದಾದರ ಏನಾತು ಆ ಪಿಂಡ ಎಲ್ಲಿ ಬೆಳತಾಯಿದೆ ಅನ್ನೋದು ಮುಖ್ಯ ಕಣ್ಲೆ ಮುಠ್ಠಾಳ. ನನಗನಿಸೊ ಮಟ್ಟಿಗೆ ಅಕಿ ಏನೋ ಸಂಚನಡಸವಳೆ...
ರಂಗೇಗೌಡ	:-	ಕೈಲಾಗದಿರೊ ಹೆಣ್ಣ ಹೆಂಗಸು, ಏನಮಾಡಾಕ ಸಾಧ್ಯ....
ಸಣ್ಣಗೌಡ	:-	ಸೊಳ್ಳೆಗೌಡನೂ ಕೂಡ ಹಿಂಗ ಅಂದ್ಕೊಂಡು ಹಾಳದ. ಒಮ್ಮೆ ಯೋಚನೆಮಾಡು.
ರಂಗೇಗೌಡ	:-	ಎಂಥ ಎಡವಟ್ಟ ಆಯ್ತುಲ್ಲಾ.... ಅಕಿ ಕತೀನು ಮುಗಿಸಿದ್ರೆ ಪಾಡಿತ್ತು.
ಸಣ್ಣಗೌಡ	:-	ಯೋಚ್ನೆಮಾಡಬ್ಯಾಡ, ಶತ್ರುನ ಮೂನಸಂಗಿದ್ರೆ ಬೇರಸಮೇತ ಕಿತ್ತ ಬಿಸಾಕಬೇಕು. ಅವಳೇನಾರು ಇಲ್ಲೆಯಿದ್ರ ಕತಿ ಮುಗಿಸು.
ರಂಗೇಗೌಡ	:-	ಮಾರ, ದುರ್ಗ....
ಮಾರ	:-	ಧಣಿ,
ರಂಗೇಗೌಡ	:-	ಎಲ್ಲದಾಳ ಅಕಿ.
ಮಾರ	:-	ನನಗೇನು ಗೊತ್ತು ಬುದ್ಧಿ ಅವರ ಮನಿಯೊಳಗ ಇರಬಹುದು....
ರಂಗೇಗೌಡ	:-	ಹುಡುಕಿ ಅಕೀನ ಮತ್ತ ಅಕಿ ಹೊಟ್ಟೆಯುಳಗ ಬೆಳತಿರೊ ನೀಚಕುಲದ ಕೂಸನ್ನ ಕೊಚ್ಚಿ ಹಾಕ್ರಿ.
ಸಣ್ಣಗೌಡ	:-	ಹೂಂ....
ರಂಗೇಗೌಡ	:-	ಲೇ ಏನ್ಮಾಡಕ ಹತ್ತಿರಿ, ಬಿದ್ರಲೇ ನಮಕ ಹರಾಮ್ ನನಮಕ್ಕಳ....
ಮಾರ	:-	ಯಾರ ಬುದ್ಧಿ ನಮಕ ಹರಾಮ್, ಆ ಶಬ್ದಾನೆ ತಿಳಿಯಾಕಿಲ್ಲ ನಮಗೆ. ನೀವು ಹೇಳ್ತಿರಿ ನಾವು ಪ್ರಾಣತಗಿತೀವಿ.
ದುರ್ಗ	:-	ನೀವ ಹೆಂಡಕುಡಿಸಿ, ಕಂಡತಿನಿಸಿ ಏಟಜೀವ ತಗಿಸಿಲ್ಲಾ ಹೇಳಿ.
ಮಾರ	:-	ಈಗ ನಿಮ್ಮ ಜಾಗಕ ಮತ್ತೊಬ್ಬ ಹುಟ್ಟಿಕೊಂಡವನೆ ಅವನೇಳಿದಂಗೆಲ್ಲಾ ನಡಿತಾಯಿದೆ...
ರಂಗೇಗೌಡ	:-	ಯಾರ್ಲೆ ಅವನು ನನ್ನ ವಿರುದ್ಧ.....
ಶರ್ಮಿಳೆ	:-	ಹೌದು. ನಾನೆ..... ಈ ಊರ ಗೌಡ ಆಗೋದಕ್ಕ ಅಯೋಗ್ಯ ನೀನು. ಏನು ಅಂದು ಕೊಂಡಿಯೋ ಬೇವಕೂಪ. ನೀ ದಾಳ

ಎಸದಂಗೆ ಎಲ್ಲಾ ನಡಿಯುತ್ತೆ ಅಂತ ತಾನೆ, ಈಗ ಹೇಳು,

ರಂಗೇಗೌಡ :- ಲೇ ಸಣ್ಣಗೌಡ. ಕಾಪಾಡಲೇ....

ಸಣ್ಣಗೌಡ :- ಬುದ್ಧಿನೆ ಇಲ್ಲದಿರೂ ನೀನು, ಊರಗೌಡನಾಗೂ ಕನಸು ಕಾಣಬೇಕಾರ. ಬುದ್ದಿಯಿರೂ ನಾನು? ಇವಳು..... ನನಗಿಂತ, ಅವಳ ಮೇಲಾಗಿರೂ ಅನ್ಯಾಯ. ನೋವನ್ನ ಸಹಿಸಿಕೊಂಡ ಭೂಮಿತಾಯಿ ಒಮ್ಮೊಂದಿಮ್ಮೆ ಸ್ಫೋಟಗೊಂಡಳು ಇವತ್ತು.....
ಹೂಂ....

ರಂಗೇಗೌಡ :- ಬರ್ರಪ್ಪೊ...... ರಂಗೇಗೌಡ ನೇಣ ಹಾಕ್ಕೊಂಡು ಆತ್ಮಹತ್ಯ ಮಾಡ್ಕೊಂಡವ್ನೆ....

* * *

C-6

ಸನ್ನಿವೇಶ–೪

ಸಂಕಜ್ಜಿ :– ದಿಂಡ, ಯಾಕ್ಲ, ಎಲ್ಲಿಂದ ತಂದೆ ಇಂತ ಅರವಿನ...

ಸೂರ್ಯಗೌಡ :– ನಾನು ದಿಂಡ ಅಲ್ಲ, ನಿನ್ನ ಮೊಮ್ಮಗ ಸೂರ್ಯ.... ಸೂರ್ಯ ಗೌಡ

ಸಂಕಜ್ಜಿ :– ಬುದ್ದಿ, ಆಚೆಹೋಗ್ರ, ನಮ್ಮ ಹಟ್ಟಿತಾವ ಯಾಕ ಬಂದಿರಿ..... ನೋಡಾಕ ತೇಟದಿಂಡನ ತರಾನೆ ಅದಿರ್ರಾ, ಅದಕ್ಕೆ ಬಾಯಿ ತೆಪ್ಪಿ ಅಂದ ಬುಟ್ಟೆ ನನ್ನೊಡೆಯ ತೆಪ್ಪಾಯ್ತು.

ಸೂರ್ಯಗೌಡ :– ಹಟ್ಟಿಗೂ ಗೌಡ್ರ ಒಣಿಗೂ ಏನೂ ವ್ಯತ್ಯಾಸ ಇಲ್ಲಬೇ, ನಮ್ಮವ್ವ ನನಗ ಕಲ್ಸಿರೊ ಪಾಠನ ಇದು. ನಾವು ಮನುಷ್ಯರು, ನೀವು ಮನುಷ್ಯರೆ, ಆದ್ರ ಒಂದ ವ್ಯತ್ಯಾಸ ಏನಪ್ಪ ಅಂದ್ರ ನಿಮ್ಮ ಶ್ರಮದ ಫಲನಾ ತಿನ್ನೋ ಬಿಕನಾಸಿಗಳು ನಾವು.

ಸಂಕಜ್ಜಿ :– ಯವ್ವ, ಯವ್ವ, ಏನದೇವರಂತ ಮಾತ ಆಡ್ತಿರ ಬುದ್ಧಿ ಆದ್ರೂವೆ, ನೀವು ನಮ್ಮ ಹಟ್ಟಿತಾವ ಬರಬಾರದು, ನಾವು ಕೀಳಜನ ಅಲ್ಲವ್ವಾ... ನಮ್ಮ ನೆಳ್ಳ ನಿಮ್ಮ ಮೇಲೆ ಬೀಳಬಾರದು.

ಸೂರ್ಯಗೌಡ :– ಆದ್ರ ರಾತ್ರಿ....

ಸಂಕಜ್ಜಿ :– ಅದು ನ್ಯಾಯ ವೇ, ನೀವಂದ್ರ ದೊಡ್ಡ ಜಾತಿ

ಸೂರ್ಯಗೌಡ :– ಅದೆಲ್ಲಾ ಮುಗಿದು ಹೋದ ಕತೆ.
ಕೋಟೆ ಉಳಿಲಿಲ್ಲಾ, ಕೊತ್ಲ ಉಳಿಲಿಲ್ಲಾ ರಾಜನ ಅಂಬಾರಿನ

		ಇಲ್ಲ ಈಗ ಮನುಷ್ಯರ ಮಾತ್ರ ಉಳ್ಕಂಡಿರೋದು. ನಿಮ್ಮನ ಒಂದಸೆಪ ಅಜ್ಜಿ ಅನ್ನಬಹುದಾ...
ಸಂಕಜ್ಜಿ	:-	ಛೇ.... ಛೇ.... ಹಾಗಮಾಡಿರ ಮತ್ತೆ.... ಮೈಲಿಗೆ.... ದೂರ ಸರಿರಿ ಬುದ್ಧಿ ದೂರಅದಿಂದಲೇ ಮಾತಾಡಿ.... ಈಗೆ ನನ್ನ ಮೊಮ್ಮಗ ಬಂದ ದಿಂಡ....
ದಿಂಡ	:-	ಯಾರಬೇ ಅದು.... ಹೊತ್ತಾರೆ ಏನು ನಿನ್ನ ಗೊಳು.
ಸೂರ್ಯಗೌಡ	:-	ನಾನು ಕಣಣ್ಣೊ ಸೂರ್ಯಗೌಡ...
ದಿಂಡ	:-	ಯಮ್ಮಬೇ, ಇಂವ, ತೀಟ ನನ್ನಂಗವ್ನೆ
ಸಂಕಜ್ಜಿ	:-	ಬಿಡ್ತು ಅನ್ನು ಇಂವ, ಅನ್ನಬ್ಯಾಡ ನಮ್ಮ ದಣಿ ಅವ್ರು. ಬುದ್ದಿಯೋರ ಅಂತೇಳು.
ಸೂರ್ಯಗೌಡ	:-	ಅಜ್ಜಿ ಈಗ ಅದೆಲ್ಲಾ ಬೇಡ.
ಸಂಕಜ್ಜಿ	:-	ಬ್ಯಾಡಂದ್ರ ಆದೀತೆ ಬುದ್ದಿಯೋರ. ಜಿದ್ದಿಗ ಬಿದ್ದು ನಿಮ್ಮಪ್ಪ ಸೊಳ್ಳೆಗೌಡ ನನಮುಗ ಸರ್ಪನ್ನ ಹುಲಿಬೋನಿಗ ದಬ್ಬಿ ಪ್ರಾಣತಗದ.... ಅಷ್ಟೆ ಸಾಕು, ನಿಮ್ಮ ಸಾಹಸವೇ ಬ್ಯಾಡ....
ದಿಂಡ	:-	ಏನಂದೆ, ನಮ್ಮಪ್ಪನ ಕೊಂದೋನು ಇವನಪ್ಪ ಸೊಳ್ಳಿಗೌಡನೆ.... ಹಂಗಾರ....
ಸೂರ್ಯ ಗೌಡ	:-	ಅದು ನಾನು ಹುಟ್ಟಾಕ ಮುಂಚೆ....
ದಿಂಡ	:-	ಎಯ್, ನೀ ಬದುಕಿರಬಾರದು... ನಿನ್ನ.....
ಸಂಕಜ್ಜಿ	:-	ಲೋ ದಿಂಡ, ಬುಡ್ಲಾ, ಬಡಗಿನ ಹಿಂಗ ಹೊಡದಾಡಿ ಹೊಡದಾಡಿನೆ ಊರಹಾಳಾತು ಹಟ್ಟಿನೂ ನಾಶ ಆತು. ಅವರಪ್ಪ ಕೊಲ್ಲಿಸಿದಾಗ್ರ ಅವನದೆನಲ್ಲಾ ತೆಪ್ಪೈತೆ. ಅವತ್ತು ಮಗನ್ನ ಕಳ್ಕೊಂಡು ದಿಕ್ಕಿಲ್ಲದಂಗೆ ಕೂಲಿನಾಲಿ ಮಾಡಿ ನಿನಗ ಸಾಕಿದ್ದು ಇದಕ್ಕೇನಾ. ನಡಿಮಗ, ನಾವಿನ್ನು ಈ ಊರಾಗ ಬದುಕಾಗ ಆಗಾಕಿಲ್ಲ
ದಿಂಡ	:-	ಎಲ್ಲಿಗ ಬೇ....
ಸಂಕ್ಕಜ್ಜಿ	:-	ಎಲ್ಲಾರೂ ದೂರಕ್ಕ. ಇವತ್ತ ನಿನಗ ಸತ್ಯ ತಿಳಿತಲ್ಲ. ಇನ್ನೂ ನೀನು

C-10

ನೆಮ್ಮದಿಯಿಂದ ಬದಕಾಕ ಆಗಕಿಲ್ಲಾ ಅದಕ್ಕ ನಮ್ಮಂದಿ ಎಲ್ಲದಾರೊ ಅಲ್ಲಿಗ ಹೋಗಮು. ಈ ಜಾಗ ಇನ್ನೂ ನಿನಗ ಸುರಕ್ಷಿತ ಅಲ್ಲ....

ಸೂರ್ಯಗೌಡ :- ಅಣ್ಣಾ... ಹೋಗಬೇಡ.

ಅಜ್ಜಿ :- ಬೇಡಾ...

* * *

C-08

ನಾಟಕ ನಮ್ಮೊಳಗೆ ಹುಟ್ಟುವ ಭಾವನೆಗಳ ಭಾವನಾತ್ಮಕ ಅಭಿವ್ಯಕ್ತಿ ಅನೇಕ ನಾಟಕಕಾರರು ಈ ಅಭಿವ್ಯಕ್ತಿಯನ್ನ ಸಮರ್ಪಕವಾಗಿ ಹಿಡಿದಿಡುವ ಪ್ರಯತ್ನ ಮಾಡಿದರೆ ಮತ್ತೆ ಕೆಲವರು ಅದರೊಳಗೆ ಮುಳುಗಿ ಎದ್ದಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಮನುಷ್ಯನ ಸಂಪೂರ್ಣ ಅಸ್ತಿತ್ವವನ್ನ ಹೊರ ಹಾಕುವ ಪ್ರಯತ್ನ ನಾಟಕದಲ್ಲಾಗುತ್ತದೆ. ಬದುಕಿಗೆ ಬಹಳ ಹತ್ತಿರವಾಗಿ, ಭಾವನೆಯ ಕದ ತಟ್ಟಿ ನೋಡುಗನ ಮನ ಮುಟ್ಟುತ್ತದೆ. ಇದನ್ನೇ ಬಹುಶಃ ಅರಿಸ್ಟಾಟಲ್ ಶುದ್ಧೀಕರಣ ಮತ್ತು ಚಿಕಿತ್ಸೆ ಎಂದು ಹೇಳಿರುವುದು. ಸೊಫೊ ಕ್ಲಿಸ್‌ನಿಂದ ಹಿಡಿದು ಶೇಕ್ಸ್‌ಪಿಯರ್‌ನವರೆಗೆ ತನ್ನ ಉಚ್ಛ್ರಾಯ ಸ್ಥಿತಿಯನ್ನ ತಲುಪಿ ಇವತ್ತಿಗೂ ತನ್ನ ಅಸ್ತಿತ್ವವನ್ನ ಉಳಿಸಿಕೊಂಡಿರುವ ಆಯಾಮ ನಾಟಕ.

– ಶಿರಗಾನಹಳ್ಳಿ ಶಾಂತನಾಯ್ಕ